


# INSTA ವಿದ್ಯಮಾನ

## ವಾರದ ಪ್ರಚಲಿತ ವಿದ್ಯಮಾನಗಳು

KAS, FDA/SDA/PDO/ GROUP C, PSI/PC, TEACHER'S EXAMS

**ಕನ್ನಡ & English**

By- ನಂದನ್ ಸರ್

## December 1st Week 2025


- ವಿಶ್ವ ಏಡ್ಸ್ ದಿನ
- ಭಾರತದ ಪರಮಾಣು ವಲಯದಲ್ಲಿ ಖಾಸಗಿ ವಲಯದ ಪ್ರವೇಶ
- ಎಲ್ಲೋರಾ ಗುಹೆಗಳು
- ಹಾರ್ನ್‌ಬಿಲ್ ಉತ್ಸವ
- ಯುನೆಸ್ಕೋದ ಕಾರ್ಯಕಾರಿ ಮಂಡಳಿಗೆ ಭಾರತ ಮರು ಆಯ್ಕೆಯಾಗಿದೆ
- ಕೇಂದ್ರ ಕೈಗಾರಿಕಾ ಭದ್ರತಾ ಪಡೆ (CISF)
- ಹಂಸ-3 ಎನ್‌ಜಿ ತರಬೇತಿ ವಿಮಾನ
- ಆಹಾರ ಮತ್ತು ಕೃಷಿಗಾಗಿ ಸಸ್ಯ ತಳಿ ಸಂಪನ್ಮೂಲಗಳ ಮೇಲಿನ ಅಂತರರಾಷ್ಟ್ರೀಯ ಒಪ್ಪಂದ (ITPGRFA)
- ಹಣಕಾಸಿನ ಒಳಗೊಳ್ಳುವಿಕೆಗಾಗಿ ರಾಷ್ಟ್ರೀಯ ಕಾರ್ಯತಂತ್ರ 2025–30
- ಜೈವಿಕ ಶಸ್ತ್ರಾಸ್ತ್ರಗಳ ಸಮಾವೇಶ ( BWC)
- ಕೇಂದ್ರ ಅಬಕಾರಿ (ತಿದ್ದುಪಡಿ) ಮಸೂದೆ, 2025
- ಸಂಚಾರ್ ಸಾಥಿ ಆ್ಯಪ್
- ಪ್ರಧಾನ ಮಂತ್ರಿ ವಿರಾಸತ್ ಕಾ ಸಂವರ್ಧನ್ (PM VIKAS)
- ಹೆರಾನ್ ಎಂಕೆ II ಮಾನವರಹಿತ ವೈಮಾನಿಕ ವಾಹನಗಳು (Heron Mk II UAVs)
- ವಿಶೇಷಚೇತನರ ಹಕ್ಕುಗಳಿಗೆ ಭಾರತದ ಬದ್ಧತೆ
- ಜಿಯೋ ಪಾರ್ಸಿ ಯೋಜನೆ
- ಜಲ್ ಜೀವನ್ ಮಿಷನ್ (JJM)
- ದೇಶೀಯ ವ್ಯವಸ್ಥಿತ ಮಹತ್ವದ ಬ್ಯಾಂಕುಗಳು (D-SIBs)
- ಭಾರತೀಯ ಕಡಲ ಸಿದ್ಧಾಂತ 2025 ರಲ್ಲಿ ನೌಕಾಪಡೆಯ ನೂತನ ವರ್ಗೀಕರಣ
- ರೋಹಿಂಗ್ಯಾ ಗಡಿಪಾರು ಪ್ರಕರಣದ ಕುರಿತು ಸರ್ವೋಚ್ಚ ನ್ಯಾಯಾಲಯದ ವಿಚಾರಣೆ
- ಹಣಕಾಸು ನಷ್ಟ ಮತ್ತು ದಿವಾಳಿ ಸಂಹಿತೆ (IBC)
- ಇಂಗಾಲದ ಸೆರೆಹಿಡಿಯುವಿಕೆ, ಬಳಕೆ ಮತ್ತು ಸಂಗ್ರಹಣೆ (CCUS)
- ತೂಕ ಇಳಿಕೆಗಾಗಿ GLP-1 ಔಷಧಗಳ ಬಳಕೆಗೆ ವಿಶ್ವ ಆರೋಗ್ಯ ಸಂಸ್ಥೆ ಬೆಂಬಲ
- ಸಮಗ್ರ ಶಿಕ್ಷಣ ಯೋಜನೆ
- ಮಲೇರಿಯಾ ಪರಾವಲಂಬಿಗಳು (Malaria Parasites)
- ಪ್ರಧಾನ ಮಂತ್ರಿ ಇಂಟರ್ನ್‌ಶಿಪ್ ಯೋಜನೆ
- ನುಮಾಲಿಗಢ ರಿಫೈನರಿ ಲಿಮಿಟೆಡ್ (NRL) ಗೆ 'ನವರತ್ನ' ಸ್ಥಾನಮಾನ
- ಆಹಾರ ಮತ್ತು ಕೃಷಿಗಾಗಿ ವಿಶ್ವದ ಭೂಮಿ ಮತ್ತು ಜಲ ಸಂಪನ್ಮೂಲಗಳ ಸ್ಥಿತಿಗತಿ (SOLAW 2025)
- ಡಾ. ರಾಜೇಂದ್ರ ಪ್ರಸಾದ್

# INSTA ವಿದ್ಯಮಾನ

## WEEKLY CURRENT AFFAIRS
## DECEMBER 1ST Week 2025

### ವಿಶ್ವ ಏಡ್ಸ್ ದಿನ

(ಸಾಮಾನ್ಯ ಅಧ್ಯಯನ -2/ಆರೋಗ್ಯ)




**ಇದೀಗ ಸುದ್ದಿಯಲ್ಲಿದೆ:**

- ಪ್ರತಿ ವರ್ಷ **ಡಿಸೆಂಬರ್ 1** ರಂದು 'ವಿಶ್ವ ಏಡ್ಸ್ ದಿನ'ವನ್ನು ಆಚರಿಸಲಾಗುತ್ತದೆ.

**ವಿಶ್ವ ಏಡ್ಸ್ ದಿನದ ಮಹತ್ವ:**

- **ಎಚ್‌ಐವಿ/ಏಡ್ಸ್ ಸಾಂಕ್ರಾಮಿಕ ರೋಗದ ಬಗ್ಗೆ ಜಾಗೃತಿ ಮೂಡಿಸಲು** ಇದನ್ನು ಪ್ರತಿವರ್ಷ ಆಚರಿಸಲಾಗುತ್ತದೆ.
- ಇದನ್ನು ಮೊದಲ ಬಾರಿಗೆ **1988 ರಲ್ಲಿ ವಿಶ್ವ ಆರೋಗ್ಯ ಸಂಸ್ಥೆ (WHO)** ಗುರುತಿಸಿತು.
- 2025ರ ಧ್ಯೇಯವಾಕ್ಯ: **"ಅಡಚಣೆಯನ್ನು ದಾಟಿ (ಮೀರಿ), ಏಡ್ಸ್ ಪ್ರತಿಕ್ರಿಯೆಯನ್ನು ಪರಿವರ್ತಿಸುವುದು"**

**ಅಕ್ವೈರ್ಡ್ ಇಮ್ಯುನೊ ಡಿಫಿಷಿಯನ್ಸಿ ಸಿಂಡ್ರೋಮ್ (AIDS) ನ ಬಗ್ಗೆ:**

- **ರೋಗಕಾರಕ:** ಇದು ದೀರ್ಘಕಾಲದ, ಸಂಭಾವ್ಯವಾಗಿ ಪ್ರಾಣಾಪಾಯಕಾರಿ ಆರೋಗ್ಯ ಸ್ಥಿತಿಯಾಗಿದ್ದು, **"ಹ್ಯೂಮನ್ ಇಮ್ಯುನೊ ಡಿಫಿಷಿಯನ್ಸಿ ವೈರಸ್" (HIV)** ನಿಂದ ಉಂಟಾಗುತ್ತದೆ. ಇದು ಮಾನವನ **ರೋಗನಿರೋಧಕ ವ್ಯವಸ್ಥೆಯನ್ನು** ಹಾನಿಗೊಳಿಸುತ್ತದೆ.
- ಹರಡುವಿಕೆ: **ಸೋಂಕಿತ ವ್ಯಕ್ತಿಯ ದೇಹದ ದ್ರವಗಳಾದ ರಕ್ತ, ವೀರ್ಯ, ಗುದನಾಳದ ದ್ರವ, ಯೋನಿ ದ್ರವ ಅಥವಾ ಎದೆ ಹಾಲಿನ ನೇರ ಸಂಪರ್ಕದ** ಮೂಲಕ ಇದು ಹರಡುತ್ತದೆ.
- **ರೋಗ ಲಕ್ಷಣಗಳು:**
  - ಹಂತ 1: **ಜ್ವರದಂತಹ ಅನಾರೋಗ್ಯ** (ಜ್ವರ, ಚಳಿ, ದದ್ದುಗಳು, ರಾತ್ರಿ ಬೆವರುವಿಕೆ).
  - ಹಂತ 2: **ವೈದ್ಯಕೀಯ ವಿಳಂಬ** (ಯಾವುದೇ ನಿರ್ದಿಷ್ಟ ರೋಗ ಲಕ್ಷಣಗಳಿಲ್ಲ).
  - ಹಂತ 3: **ಏಡ್ಸ್** (ರೋಗನಿರೋಧಕ ವ್ಯವಸ್ಥೆಯು ದುರ್ಬಲಗೊಳ್ಳುವುದು).
- ತಡೆಗಟ್ಟುವಿಕೆ: **"ಚಿಕಿತ್ಸೆಗಿಂತ ತಡೆಗಟ್ಟುವಿಕೆ ಲೇಸು".** ರಕ್ಷಣಾತ್ಮಕ ತಂತ್ರಗಳನ್ನು ಬಳಸುವುದು, ಕಲುಷಿತವಾಗದ ಸೂಜಿಗಳನ್ನು ಉಪಯೋಗಿಸುವುದು ಮತ್ತು ತಾಯಿಯಿಂದ ಮಗುವಿಗೆ ಹರಡುವುದನ್ನು ತಡೆಯುವುದು ಅತ್ಯಗತ್ಯವಾಗಿದೆ.
- ಚಿಕಿತ್ಸೆ: ಹೆಚ್‌ಐವಿ ಸೋಂಕಿಗೆ **ಯಾವುದೇ ಶಾಶ್ವತ ಚಿಕಿತ್ಸೆ ಇಲ್ಲ.** ಆದಾಗ್ಯೂ, **ಆಂಟಿರೀಟ್ರೋವೈರಲ್ ಔಷಧಿಗಳೊಂದಿಗೆ (ART)** ಚಿಕಿತ್ಸೆ ನೀಡಲಾಗುತ್ತದೆ. ಇವು ದೇಹದಲ್ಲಿ ವೈರಸ್ ಸ್ವಪ್ರತೀಕರಣಗೊಳ್ಳುವುದನ್ನು ತಡೆಯುತ್ತವೆ.

> *ಗಮನಿಸಿ:* **ಚಿಕಿತ್ಸೆ ನೀಡದ ಹೆಚ್‌ಐವಿ, ಏಡ್ಸ್ ಆಗಿ ಪರಿವರ್ತನೆಗೊಳ್ಳಬಹುದು, ಇದು ಸಾಮಾನ್ಯವಾಗಿ ಹಲವು ವರ್ಷಗಳ ನಂತರ ಸಂಭವಿಸುತ್ತದೆ.**

**ಭಾರತ ಸರ್ಕಾರ ಕೈಗೊಂಡ ಕ್ರಮಗಳು**


- **ರಾಷ್ಟ್ರೀಯ ಏಡ್ಸ್ ನಿಯಂತ್ರಣ ಕಾರ್ಯಕ್ರಮ (NACP):** ಇದೊಂದು ಕೇಂದ್ರ ವಲಯದ ಯೋಜನೆಯಾಗಿದೆ.

INSTA KAS

- ಹೆಚ್‌ಐವಿ ಸಾಂಕ್ರಾಮಿಕ ರೋಗವನ್ನು ತಡೆಗಟ್ಟುವುದು ಮತ್ತು ಹಿಮ್ಮೆಟ್ಟಿಸುವ **ವಿಶ್ವಸಂಸ್ಥೆಯ 6ನೇ ಸಹಸ್ರಮಾನದ ಅಭಿವೃದ್ಧಿ ಗುರಿಯನ್ನು** (MDG 6) ಭಾರತ ಸಾಧಿಸಿದೆ.
- **ಪಿಪಿಟಿಸಿಟಿ (PPTCT):** ಪೋಷಕರಿಂದ ಮಗುವಿಗೆ ಸೋಂಕು ಹರಡುವುದನ್ನು ತಡೆಗಟ್ಟುವ ಕಾರ್ಯಕ್ರಮ.
- **ಹೆಚ್‌ಐವಿ /ಏಡ್ಸ್ ಕಾಯ್ದೆ, 2017:** ಹೆಚ್‌ಐವಿ -ಸೋಂಕಿತ ಜನರ ವಿರುದ್ಧ ಯಾವುದೇ ಆಧಾರದ ಮೇಲೆ ತಾರತಮ್ಯ ಮಾಡುವುದನ್ನು ಈ ಕಾಯ್ದೆ ನಿಷೇಧಿಸುತ್ತದೆ.
- **90:90:90 ಕಾರ್ಯತಂತ್ರ:** ಇದು **UNAIDS** ಸಂಸ್ಥೆ ಅಳವಡಿಸಿಕೊಂಡಿರುವ ಕಾರ್ಯತಂತ್ರವಾಗಿದೆ**. {2020 ರ ವೇಳೆಗೆ 90% ರೋಗನಿರ್ಣಯ, 90% ಚಿಕಿತ್ಸೆ (ಆಂಟಿರೀಟ್ರೋವೈರಲ್ ಚಿಕಿತ್ಸೆಯೊಂದಿಗೆ - ART ಮೂಲಕ) ಮತ್ತು 90% ವೈರಾಣು ನಿಗ್ರಹ}** ಇದನ್ನು ಈಗ **95-95-95 ಗುರಿಯೊಂದಿಗೆ 10 ವರ್ಷಗಳವರೆಗೆ** ವಿಸ್ತರಿಸಲಾಗಿದೆ.
- **"ಪ್ರಾಜೆಕ್ಟ್ ಆಕ್ಸಿಲರೇಟ್" (ACCELERATE):** ಇದು **ಜಾನ್ ಹಾಕಿನ್ ಮತ್ತು ನ್ಯಾಕೋ** (NACO) ಸಂಸ್ಥೆಯ ಉಪಕ್ರಮವಾಗಿದ್ದು, **'ಸೇಫ್ ಜಿಂದಗಿ'** ಆನ್‌ಲೈನ್ ಪೋರ್ಟಲ್ ಮೂಲಕ ಹೆಚ್‌ಐವಿ ಸೇವೆಗಳನ್ನು ಒದಗಿಸುತ್ತದೆ.
- **ಮಿಷನ್ ಸಂಪರ್ಕ್:** ಆಂಟಿರೀಟ್ರೋವೈರಲ್ ಥೆರಪಿಯನ್ನು (ART) ಅರ್ಧಕ್ಕೆ ನಿಲ್ಲಿಸಿದ, ಹೆಚ್‌ಐವಿ ಯೊಂದಿಗೆ ಬದುಕುತ್ತಿರುವ ಜನರನ್ನು (PLHIV) ಮರಳಿ ಚಿಕಿತ್ಸೆಗೆ ತರುವುದು ಇದರ ಉದ್ದೇಶವಾಗಿತ್ತು.

## ಭಾರತದ ಪರಮಾಣು ವಲಯದಲ್ಲಿ ಖಾಸಗಿ ವಲಯದ ಪ್ರವೇಶ

(ಸಾಮಾನ್ಯ ಅಧ್ಯಯನ -3/ ಇಂಧನ/ಶಕ್ತಿ)




### ಇದೀಗ ಸುದ್ದಿಯಲ್ಲಿದೆ:

- ಪರಮಾಣು ವಲಯವನ್ನು ಖಾಸಗಿ ಪಾಲುದಾರರಿಗೆ ಮುಕ್ತಗೊಳಿಸುವ ನಿಟ್ಟಿನಲ್ಲಿ ಸರ್ಕಾರವು ಹೆಜ್ಜೆ ಇಡುತ್ತಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ತಿಳಿಸಿದ್ದಾರೆ.

### ಭಾರತದ ಪರಮಾಣು ವಲಯ:

- ಭಾರತದಲ್ಲಿನ ಪರಮಾಣು ವಿದ್ಯುತ್ ಸ್ಥಾವರಗಳು ಪ್ರಸ್ತುತ **"ಭಾರತದ ಪರಮಾಣು ವಿದ್ಯುತ್ ನಿಗಮ ನಿಯಮಿತ"** (NPCIL) ಒಡೆತನದಲ್ಲಿದ್ದು, ಸಂಪೂರ್ಣವಾಗಿ ಆ ಸಂಸ್ಥೆಯಿಂದಲೇ ನಿರ್ವಹಿಸಲ್ಪಡುತ್ತವೆ.
- **ಪ್ರಮುಖ ಕಾನೂನುಗಳು:** ಖಾಸಗಿ ವಲಯದ ಭಾಗವಹಿಸುವಿಕೆಗೆ ಅವಕಾಶ ಕಲ್ಪಿಸಲು, ಸರ್ಕಾರವು ಈ ಕೆಳಗಿನ ಪ್ರಮುಖ ಕಾನೂನುಗಳಿಗೆ ತಿದ್ದುಪಡಿ ತರಲು ಪ್ರಸ್ತಾಪಿಸಿದೆ:
    1. **ಪರಮಾಣು ಶಕ್ತಿ ಕಾಯ್ದೆ, 1962:** ಇದು ಪರಮಾಣು ಶಕ್ತಿಯ ಅಭಿವೃದ್ಧಿ ಮತ್ತು ನಿಯಂತ್ರಣಕ್ಕೆ ಅಗತ್ಯವಿರುವ ಮೂಲ ಚೌಕಟ್ಟನ್ನು ಒದಗಿಸುತ್ತದೆ.
    2. **ಪರಮಾಣು ಹಾನಿಗಾಗಿ ನಾಗರಿಕ ಹೊಣೆಗಾರಿಕೆ ಕಾಯ್ದೆ, 2010:** ಪರಮಾಣು ಅವಘಡಗಳು

INSTA KAS

ಸಂಭವಿಸಿದಾಗ **ಪರಿಹಾರ** ನೀಡುವ ಕಾರ್ಯವಿಧಾನಗಳನ್ನು ಇದು ಖಾತ್ರಿಪಡಿಸುತ್ತದೆ.

### ಪರಮಾಣು ಶಕ್ತಿಯ ಬಗ್ಗೆ:

- ವ್ಯಾಖ್ಯಾನ: **ಪರಮಾಣು ಕ್ರಿಯೆಗಳ ಸಮಯದಲ್ಲಿ ಬಿಡುಗಡೆಯಾಗುವ ಶಕ್ತಿಯೇ** 'ಪರಮಾಣು ಶಕ್ತಿ'. ಇದು **ವಿದಳನ** (ಪರಮಾಣು ನ್ಯೂಕ್ಲಿಯಸ್‌ಗಳ ವಿಭಜನೆ) ಅಥವಾ **ಸಮ್ಮಿಲನ** (ಪರಮಾಣು ನ್ಯೂಕ್ಲಿಯಸ್‌ಗಳ ವಿಲೀನ) ಪ್ರಕ್ರಿಯೆಯ ಮೂಲಕ ಬಿಡುಗಡೆಯಾಗುತ್ತದೆ.

### ಭಾರತದಲ್ಲಿ ಪರಮಾಣು ವಿದ್ಯುತ್ ಸಾಮರ್ಥ್ಯದ ಸ್ಥಿತಿಗತಿ:

- **ಪ್ರಸ್ತುತ ಸಾಮರ್ಥ್ಯ: 8,180 ಮೆಗಾವ್ಯಾಟ್ (MW)** ಆಗಿದ್ದು, ಇದು 24 ಪರಮಾಣು ವಿದ್ಯುತ್ ಸ್ಥಾವರಗಳಲ್ಲಿ ಹಂಚಿಕೆಯಾಗಿದೆ.
- ಭವಿಷ್ಯದ ಗುರಿ: **2047 ರ ವೇಳೆಗೆ 100 GW** ಪರಮಾಣು ವಿದ್ಯುತ್ ಸಾಮರ್ಥ್ಯವನ್ನು ಸಾಧಿಸುವ ಗುರಿ.
- **ಸಾಮರ್ಥ್ಯ ವಿಸ್ತರಣೆ:** ಗುಜರಾತ್, ರಾಜಸ್ಥಾನ, ತಮಿಳುನಾಡು, ಹರಿಯಾಣ, ಕರ್ನಾಟಕ ಮತ್ತು ಮಧ್ಯಪ್ರದೇಶದಾದ್ಯಂತ 10 ಹೊಸ ಸ್ಥಾವರಗಳು (ಒಟ್ಟು 8 GW ಸಾಮರ್ಥ್ಯ) ನಿರ್ಮಾಣ ಹಂತದಲ್ಲಿವೆ.

### ಭಾರತದ ಪ್ರಮುಖ ಪರಮಾಣು ವಿದ್ಯುತ್ ಸ್ಥಾವರಗಳು:

| ಪರಮಾಣು ವಿದ್ಯುತ್ ಸ್ಥಾವರ | ರಾಜ್ಯ | ಒಟ್ಟು ಸಾಮರ್ಥ್ಯ (MW) |
|---|---|---|
| ತಾರಾಪುರ | ಮಹಾರಾಷ್ಟ್ರ | 1,400 |
| ರಾವತಭಾಟ | ರಾಜಸ್ಥಾನ | 1,180 |
| ಕುಂದಕುಳಂ | ತಮಿಳುನಾಡು | 2,000 |
| ಕೈಗಾ | ಕರ್ನಾಟಕ | 880 |
| ಕಾಕ್ರಪಾರ | ಗುಜರಾತ್ | 1140 |
| ಕಲ್ಪಕ್ಕಂ | ತಮಿಳುನಾಡು | 440 |
| ನರೋರಾ | ಉತ್ತರ ಪ್ರದೇಶ | 440 |

### ಪ್ರಸ್ತಾಪಿತ/ನಿರ್ಮಾಣ ಹಂತದಲ್ಲಿರುವ ವಿದ್ಯುತ್ ಸ್ಥಾವರಗಳು:


| ವಿದ್ಯುತ್ ಸ್ಥಾವರ | ನಿರ್ವಹಿಸುವ ಸಂಸ್ಥೆ | ರಾಜ್ಯ | ಒಟ್ಟು ಸಾಮರ್ಥ್ಯ (MW) |
|---|---|---|---|
| ಜೈತಾಪುರ | ಭಾರತದ ಪರಮಾಣು ವಿದ್ಯುತ್ ನಿಗಮ ನಿಯಮಿತ (NPCIL) | ಮಹಾರಾಷ್ಟ್ರ | 9,900 |
| ಕೊವ್ವಾಡ | ಭಾರತದ ಪರಮಾಣು ವಿದ್ಯುತ್ ನಿಗಮ ನಿಯಮಿತ (NPCIL) | ಆಂಧ್ರ ಪ್ರದೇಶ | 6,600 |
| ಮಿಥಿ ವಿರ್ಡಿ | ಭಾರತದ ಪರಮಾಣು ವಿದ್ಯುತ್ ನಿಗಮ ನಿಯಮಿತ (NPCIL) | ಗುಜರಾತ | 6,000 |
| ಹರಿಪುರ | ಭಾರತದ ಪರಮಾಣು ವಿದ್ಯುತ್ ನಿಗಮ ನಿಯಮಿತ (NPCIL) | ಪಶ್ಚಿಮ ಬಂಗಾಳ | 4,000 |

INSTAKAS

| | | | |
|---|---|---|---|
| ಕುಂದಕುಳಂ (ವಿಸ್ತರಣೆ) | ಭಾರತದ ಪರಮಾಣು ವಿದ್ಯುತ್ ನಿಗಮ ನಿಯಮಿತ (NPCIL) | ತಮಿಳುನಾಡು | 2,800 |
| ಗೋರಖ್‌ಪುರ | ಭಾರತದ ಪರಮಾಣು ವಿದ್ಯುತ್ ನಿಗಮ ನಿಯಮಿತ (NPCIL) | ಹರಿಯಾಣ | 2,800 |
| ಭೀಮ್‌ಪುರ | ಭಾರತದ ಪರಮಾಣು ವಿದ್ಯುತ್ ನಿಗಮ ನಿಯಮಿತ (NPCIL) | ಮಧ್ಯ ಪ್ರದೇಶ | 2,800 |
| ಮಹಿ ಬನ್ಸ್ವಾರ | ಭಾರತದ ಪರಮಾಣು ವಿದ್ಯುತ್ ನಿಗಮ ನಿಯಮಿತ (NPCIL) | ರಾಜಸ್ಥಾನ | 1,400 |
| ಕೈಗಾ (ವಿಸ್ತರಣೆ) | ಭಾರತದ ಪರಮಾಣು ವಿದ್ಯುತ್ ನಿಗಮ ನಿಯಮಿತ (NPCIL) | ಕರ್ನಾಟಕ | 1,400 |
| ಚುಟ್ಕಾ | ಭಾರತದ ಪರಮಾಣು ವಿದ್ಯುತ್ ನಿಗಮ ನಿಯಮಿತ (NPCIL) | ಮಧ್ಯ ಪ್ರದೇಶ | 1,200 |
| ಮದ್ರಾಸ್ | ಭಾರತೀಯ ನಾಭಿಕೀಯ ವಿದ್ಯುತ್ ನಿಗಮ ನಿಯಮಿತ | ತಮಿಳುನಾಡು | 300 |

## ಎಲ್ಲೋರಾ ಗುಹೆಗಳು

(ಸಾಮಾನ್ಯ ಅಧ್ಯಯನ : -1/ ಇತಿಹಾಸ ಮತ್ತು ಸಂಸ್ಕೃತಿ)



### ಇದೀಗ ಸುದ್ದಿಯಲ್ಲಿದೆ:

- ಎಲ್ಲೋರಾ ಗುಹೆಗಳ ಸುತ್ತಮುತ್ತಲಿರುವ, ಕಡಿಮೆ ಪ್ರಚಲಿತದಲ್ಲಿರುವ ಪಾರಂಪರಿಕ ತಾಣಗಳಿಗೆ ಹೆಚ್ಚಿನ ಪ್ರಚಾರ ಮತ್ತು ಮನ್ನಣೆ ನೀಡುವಂತೆ ಪ್ರಸಿದ್ಧ ಸ್ಕಾಟ್ಲೆಂಡಿನ ಇತಿಹಾಸಕಾರ ವಿಲಿಯಂ ಡಾಲ್ರಿಂಪಲ್ ಅವರು ಮಹಾರಾಷ್ಟ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

### ಎಲ್ಲೋರಾ ಗುಹೆಗಳ ಬಗ್ಗೆ:


- ಸ್ಥಳ: ಮಹಾರಾಷ್ಟ್ರದ **ಛತ್ರಪತಿ ಸಂಭಾಜಿನಗರ (ಔರಂಗಾಬಾದ್)** ಜಿಲ್ಲೆಯಲ್ಲಿರುವ ಎಲ್ಲೋರಾ ಗುಹೆಗಳು, ಭಾರತದ ಪ್ರಪ್ರಥಮ **ಯುನೆಸ್ಕೋ ವಿಶ್ವ ಪರಂಪರೆಯ ತಾಣಗಳಲ್ಲಿ** ಒಂದಾಗಿವೆ.


INSTAKAS

- ಕಾಲಘಟ್ಟ: ಈ ಗುಹೆಗಳ ಸಂಕೀರ್ಣವನ್ನು **ಕ್ರಿ.ಶ. 600 ಮತ್ತು ಕ್ರಿ.ಶ.1000** ರ ನಡುವಿನ ಅವಧಿಯಲ್ಲಿ ಕೆತ್ತಲಾಗಿದೆ. ಇದು ಪ್ರಮುಖವಾಗಿ **ಚಾಲುಕ್ಯರು, ರಾಷ್ಟ್ರಕೂಟರು ಮತ್ತು ಯಾದವರ** ಆಳ್ವಿಕೆಯ ಕಾಲಘಟ್ಟವನ್ನು ಪ್ರತಿನಿಧಿಸುತ್ತದೆ.
- **ಧಾರ್ಮಿಕ ಬಹುತ್ವ:** ಈ ಸಂಕೀರ್ಣವು ಒಟ್ಟು 34 ಪ್ರಮುಖ ಗುಹೆಗಳನ್ನು ಒಳಗೊಂಡಿದೆ (**12 ಬೌದ್ಧ, 17 ಹಿಂದೂ ಮತ್ತು 5 ಜೈನ ಗುಹೆಗಳು**). ಇದು ಅಂದಿನ ಕಾಲದ ವಿಶಿಷ್ಟವಾದ **ಅಂತರ್‌ಧರ್ಮೀಯ ಸಾಮರಸ್ಯ** ಮತ್ತು ಕಲಾತ್ಮಕ ವಿನಿಮಯಕ್ಕೆ ಸಾಕ್ಷಿಯಾಗಿದೆ.

**ಪ್ರಮುಖ ವಾಸ್ತುಶಿಲ್ಪದ ಲಕ್ಷಣಗಳು:**

- **ಕೈಲಾಸನಾಥ ದೇವಾಲಯ (ಗುಹೆ 16):** ಇದನ್ನು ಬೃಹತ್ **ಏಕಶಿಲಾ ಜ್ವಾಲಾಮುಖಿ (ಬಸಾಲ್ಟ್) ಶಿಲೆಯಿಂದ** ಕೆತ್ತಲಾಗಿದೆ. ಇದು ಹಿಂದೂಗಳ ದೇವರಾದ **ಶಿವನಿಗೆ** ಸಮರ್ಪಿತವಾದ ಅದ್ಭುತ ರಚನೆಯಾಗಿದೆ.
- **ಬೌದ್ಧ ಗುಹೆಗಳು:** ಇವುಗಳಲ್ಲಿ ಪ್ರಮುಖವಾಗಿ ಬೌದ್ಧ ಸನ್ಯಾಸಿಗಳ ವಸತಿಗಳಾದ **ವಿಹಾರಗಳು** ಮತ್ತು ಪ್ರಾರ್ಥನಾ ಮಂದಿರಗಳಾದ **ಚೈತ್ಯಾಲಯಗಳನ್ನು** ಕಾಣಬಹುದು.
- **ಜೈನ ಗುಹೆಗಳು:** ಎಲ್ಲೋರಾ ನಿರ್ಮಾಣದ ಅಂತಿಮ ಅಥವಾ **ನಂತರದ ಹಂತದಲ್ಲಿ** ಇವುಗಳನ್ನು ನಿರ್ಮಿಸಲಾಗಿದೆ.




## ಹಾರ್ನ್‌ಬಿಲ್ ಉತ್ಸವ

**(ಸಾಮಾನ್ಯ ಅಧ್ಯಯನ : 1/ಸಂಸ್ಕೃತಿ)**



**ಇದೀಗ ಸುದ್ದಿಯಲ್ಲಿದೆ:**

- **"ಉತ್ಸವಗಳ ಉತ್ಸವ"** ಎಂದೇ ಖ್ಯಾತಿಯಾಗಿರುವ **ನಾಗಾಲ್ಯಾಂಡ್‌ನ** ಪ್ರಸಿದ್ಧ "ಹಾರ್ನ್‌ಬಿಲ್" ಉತ್ಸವದ 26ನೇ ಆವೃತ್ತಿಯು, ಕೊಹಿಮಾದ **ಕಿಸಾಮಾದಲ್ಲಿರುವ "ನಾಗಾ ಪರಂಪರೆ ಗ್ರಾಮ"**ದಲ್ಲಿ ಆರಂಭಗೊಂಡಿದೆ. ಇದು ರಾಜ್ಯದ

**'ರಾಜ್ಯೋತ್ಸವ ದಿನ'ದೊಂದಿಗೆ (ಡಿಸೆಂಬರ್ 1)** ಕಾಕತಾಳೀಯವಾಗಿ ಜರುಗುತ್ತದೆ.

### ಹಾರ್ನ್‌ಬಿಲ್ ಉತ್ಸವದ ಬಗ್ಗೆ:

- ಸಮಯ ಮತ್ತು ಸ್ಥಳ: ಇದು **ವಾರ್ಷಿಕವಾಗಿ ಡಿಸೆಂಬರ್ ಮೊದಲ ವಾರದಲ್ಲಿ** ಕೊಹಿಮಾ ಸಮೀಪದ **ಕಿಸಾಮಾದಲ್ಲಿ** ನಡೆಯುತ್ತದೆ.
- ವೈಶಿಷ್ಟ್ಯ: ಇದು ಎಲ್ಲಾ **ನಾಗಾ ಬುಡಕಟ್ಟುಗಳ** ರೋಮಾಂಚಕ ಸಾಂಸ್ಕೃತಿಕ ಪ್ರದರ್ಶನವಾಗಿದೆ.

### ಹಾರ್ನ್‌ಬಿಲ್ ಉತ್ಸವದ ಮಹತ್ವ:

- **ಉದ್ದೇಶ:** ಏಕತೆಯನ್ನು ಉತ್ತೇಜಿಸಲು ಮತ್ತು ಜನಾಂಗೀಯ ಪರಂಪರೆಯನ್ನು ಸಂರಕ್ಷಿಸುವ ಉದ್ದೇಶದಿಂದ ಇದನ್ನು **2000ನೇ ಇಸವಿಯಲ್ಲಿ** ರೂಪಿಸಿ ಆರಂಭಿಸಲಾಯಿತು.
- **ಸಂಸ್ಕೃತಿ ಪ್ರದರ್ಶನ:** ಇದು ಸಂಗೀತ, ಕರಕುಶಲ ವಸ್ತುಗಳು, ತಿನಿಸು ಮತ್ತು ಜಾನಪದಗಳ ಮೂಲಕ ಸಾಂಪ್ರದಾಯಿಕ ಮತ್ತು ಸಮಕಾಲೀನ ನಾಗಾ ಸಂಸ್ಕೃತಿ ಎರಡನ್ನೂ ಎತ್ತಿ ತೋರಿಸುತ್ತದೆ.

### ಗ್ರೇಟರ್ ಹಾರ್ನ್‌ಬಿಲ್ ನ ಬಗ್ಗೆ:



- ವೈಜ್ಞಾನಿಕ ಹೆಸರು: ***ಬ್ಯುಸೆರೋಸ್ ಬೈಕಾರ್ನಿಸ್***
- ಇತರ ಹೆಸರುಗಳು: ಇದನ್ನು **ಕಾನ್ಕೇವ್-ಕ್ಯಾಸ್ಕ್ಡ್ ಹಾರ್ನ್‌ಬಿಲ್, ಗ್ರೇಟ್ ಇಂಡಿಯನ್ ಹಾರ್ನ್‌ಬಿಲ್ ಅಥವಾ ಗ್ರೇಟ್ ಪೈಡ್ ಹಾರ್ನ್‌ಬಿಲ್** ಎಂತಲೂ ಕರೆಯಲಾಗುತ್ತದೆ.
- ಆವಾಸಸ್ಥಾನ: ಇದು **ಭಾರತೀಯ ಉಪಖಂಡ** ಮತ್ತು **ಆಗ್ನೇಯ ಏಷ್ಯಾದಲ್ಲಿ** ಕಂಡುಬರುತ್ತದೆ.
- **ವೈಶಿಷ್ಟ್ಯ :** ಗ್ರೇಟರ್ ಹಾರ್ನ್‌ಬಿಲ್‌ನ ಅತ್ಯಂತ ಪ್ರಮುಖ ಲಕ್ಷಣವೆಂದರೆ ಅದರ ಬೃಹತ್ ಕೊಕ್ಕಿನ ಮೇಲಿರುವ ಪ್ರಕಾಶಮಾನವಾದ ಹಳದಿ ಮತ್ತು ಕಪ್ಪು ಬಣ್ಣದ **ಶಿರಸ್ತ್ರಾಣ/ ತಲೆಕವಚ** ('ಕ್ಯಾಸ್ಕ್'- ಕೆಲವು ಪಕ್ಷಿಗಳ ತಲೆಯ ಮೇಲಿರುವ ಗಟ್ಟಿಯಾದ ರಚನೆ).
- ಉತ್ಸವ: ಹಾರ್ನ್‌ಬಿಲ್ ಉತ್ಸವವನ್ನು **ನಾಗಾಲ್ಯಾಂಡ್‌ನಲ್ಲಿ** ಆಚರಿಸಲಾಗುತ್ತದೆ.
- **ರಾಜ್ಯ ಪಕ್ಷಿ:** ಗ್ರೇಟರ್ ಹಾರ್ನ್‌ಬಿಲ್ **ಅರುಣಾಚಲ ಪ್ರದೇಶ** ಮತ್ತು **ಕೇರಳದ** ರಾಜ್ಯ ಪಕ್ಷಿಯಾಗಿದೆ.

### ಸಂರಕ್ಷಣಾ ಸ್ಥಿತಿ:

- IUCN ಸ್ಥಿತಿ: **ದುರ್ಬಲ (Vu).**
- ಭಾರತೀಯ ವನ್ಯಜೀವಿ ಸಂರಕ್ಷಣಾ ಕಾಯಿದೆ, 1972: **ಅನುಸೂಚಿ I.**

## ಯುನೆಸ್ಕೋದ ಕಾರ್ಯಕಾರಿ ಮಂಡಳಿಗೆ ಭಾರತ ಮರು ಆಯ್ಕೆಯಾಗಿದೆ

**(ಸಾಮಾನ್ಯ ಅಧ್ಯಯನ : 2/ಅಂತರರಾಷ್ಟ್ರೀಯ ಸಂಬಂಧಗಳು)**

### ಇದೀಗ ಸುದ್ದಿಯಲ್ಲಿದೆ:

- ಭಾರತವು ಯುನೆಸ್ಕೋದ ಕಾರ್ಯಕಾರಿ ಮಂಡಳಿಗೆ **2025-29ರ ಅವಧಿಗೆ** ಮರು ಆಯ್ಕೆಯಾಗಿದೆ.

### ಯುನೆಸ್ಕೋದ ಕಾರ್ಯಕಾರಿ ಮಂಡಳಿಯ ಬಗ್ಗೆ:

- ರಚನೆ: ಇದು **ವಿಶ್ವಸಂಸ್ಥೆಯ ಮೂರು ಸಾಂವಿಧಾನಿಕ ಅಂಗಗಳಲ್ಲಿ** ಒಂದಾಗಿದೆ. (ಉಳಿದ ಎರಡು ಅಂಗಗಳೆಂದರೆ **'ಸಾಮಾನ್ಯ ಸಮ್ಮೇಳನ'** ಮತ್ತು **'ಸಚಿವಾಲಯ'**). ಈ ಮಂಡಳಿಯನ್ನು **ಸಾಮಾನ್ಯ ಸಮ್ಮೇಳನವು ಆಯ್ಕೆ ಮಾಡುತ್ತದೆ.**
- ಅಧಿಕಾರ: ಇದು **ಸಾಮಾನ್ಯ ಸಮ್ಮೇಳನದ** ಅಧಿಕಾರದ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತದೆ.

- **ಕಾರ್ಯಗಳು:** ಇದು ಮಹಾನಿರ್ದೇಶಕರು ಸಲ್ಲಿಸಿದ ಸಂಸ್ಥೆಯ ಕೆಲಸದ ಕಾರ್ಯಕ್ರಮ ಮತ್ತು ಅದಕ್ಕೆ ಸಂಬಂಧಿಸಿದ ಆಯಾವ್ಯಾಯ ಅಂದಾಜುಗಳನ್ನು ಪರಿಶೀಲಿಸುತ್ತದೆ.
- ಸದಸ್ಯತ್ವ: ಇದು **58 ಸದಸ್ಯ ರಾಷ್ಟ್ರಗಳನ್ನು** ಒಳಗೊಂಡಿದ್ದು, ಪ್ರತಿಯೊಂದು ರಾಷ್ಟ್ರವೂ **ನಾಲ್ಕು ವರ್ಷಗಳ** ಅಧಿಕಾರಾವಧಿಯನ್ನು ಹೊಂದಿರುತ್ತದೆ.

## ಕೇಂದ್ರ ಕೈಗಾರಿಕಾ ಭದ್ರತಾ ಪಡೆ (CISF)

**ಸಾಮಾನ್ಯ ಅಧ್ಯಯನ :** 3/ಆಂತರಿಕ ಭದ್ರತೆ

### ಇದೀಗ ಸುದ್ದಿಯಲ್ಲಿದೆ:

- ಸಂಸತ್ತಿನ ಭದ್ರತಾ ಕರ್ತವ್ಯಗಳಿಗೆ ನಿಯೋಜಿಸಲಾದ ಸಿಬ್ಬಂದಿಗಾಗಿ, ಕೇಂದ್ರ ಕೈಗಾರಿಕಾ ಭದ್ರತಾ ಪಡೆಯು (CISF) **'ಪರಿಷ್ಕೃತ ನಿಯೋಜನೆ ನೀತಿ'**ಯನ್ನು ಪರಿಚಯಿಸಿದೆ.

### ಕೇಂದ್ರ ಕೈಗಾರಿಕಾ ಭದ್ರತಾ ಪಡೆ (CISF) ಯ ಕುರಿತು:

- ಸ್ಥಾಪನೆ: **'ಕೇಂದ್ರ ಕೈಗಾರಿಕಾ ಭದ್ರತಾ ಪಡೆ ಕಾಯ್ದೆ, 1968'** ರ ಅಡಿಯಲ್ಲಿ 1969 ರಲ್ಲಿ ಇದನ್ನು ಸ್ಥಾಪಿಸಲಾಯಿತು. ಇದೊಂದು **ಅರೆಸೈನಿಕ** ಪಡೆಯಾಗಿದೆ.
- ದಿನಾಚರಣೆ: ಪ್ರತಿ ವರ್ಷ **ಮಾರ್ಚ್ 10** ರಂದು **'CISF ಸಂಸ್ಥಾಪನಾ ದಿನ'ವನ್ನು** (Raising Day) ಆಚರಿಸಲಾಗುತ್ತದೆ.
- ನಿಯಂತ್ರಣ: ಇದು ಭಾರತ ಸರ್ಕಾರದ **ಗೃಹ ಸಚಿವಾಲಯದ** ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ.

**CISF ನ ಕಾರ್ಯಗಳು:** ಇದು ಈ ಕೆಳಗಿನ ಕಾರ್ಯತಂತ್ರದ ಸಂಸ್ಥೆಗಳಿಗೆ ಭದ್ರತೆಯನ್ನು ಒದಗಿಸುತ್ತದೆ, ಅವುಗಳೆಂದರೆ:

- ಬಾಹ್ಯಾಕಾಶ ಇಲಾಖೆ.
- ಪರಮಾಣು ಶಕ್ತಿ ಇಲಾಖೆ.
- ವಿಮಾನ ನಿಲ್ದಾಣಗಳು, ದೆಹಲಿ ಮೆಟ್ರೋ ಮತ್ತು ಬಂದರುಗಳು.
- ಐತಿಹಾಸಿಕ ಸ್ಮಾರಕಗಳು.
- ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ, ವಿದ್ಯುತ್, ಕಲ್ಲಿದ್ದಲು, ಉಕ್ಕು ಮತ್ತು ಗಣಿಗಾರಿಕೆಯಂತಹ ಭಾರತೀಯ ಆರ್ಥಿಕತೆಯ ಮೂಲಭೂತ ಕ್ಷೇತ್ರಗಳು.

## ಹಂಸ-3 ಎನ್‌ಜಿ ತರಬೇತಿ ವಿಮಾನ

**ಪಠ್ಯಕ್ರಮ:** GS3/ ರಕ್ಷಣೆ (Defence)




### ಇದೀಗ ಸುದ್ದಿಯಲ್ಲಿದೆ:

- **ಬೆಂಗಳೂರಿನ "ಸಿಎಸ್‌ಐಆರ್-ರಾಷ್ಟ್ರೀಯ ವೈಮಾನಿಕ ಪ್ರಯೋಗಾಲಯ"** (CSIR-NAL) ಸಂಸ್ಥೆಯು, ದೇಶೀಯವಾಗಿ ಅಭಿವೃದ್ಧಿಪಡಿಸಲಾದ 'ಹಂಸ-3 (ಎನ್‌ಜಿ)' ತರಬೇತಿ ವಿಮಾನದ "ಉತ್ಪಾದನಾ ಆವೃತ್ತಿ"ಯನ್ನು ಬಿಡುಗಡೆ ಮಾಡಿದೆ.

### ಹಂಸ-3 ರ ಬಗ್ಗೆ:

- ಹಂಸ-3 ಎಂಬುದು **CSIR-NAL ಸಂಸ್ಥೆಯು ದೇಶೀಯವಾಗಿ ಅಭಿವೃದ್ಧಿಪಡಿಸಿದ ಎರಡು - ಆಸನಗಳುಳ್ಳ ತರಬೇತಿ ವಿಮಾನವಾಗಿದೆ.**
- ಇದು **ಪ್ರಾಥಮಿಕ ವಿಮಾನ ತರಬೇತಿಗಾಗಿ** ವಿನ್ಯಾಸಗೊಳಿಸಲಾದ, ಸಂಕೇತ ಆಧಾರಿತ ಉಪಕರಣಗಳು, ಯಾಂತ್ರಿಕವಾಗಿ ಕಾರ್ಯನಿರ್ವಹಿಸುವ ರೆಕ್ಕೆಗಳು ಮತ್ತು ಪ್ರಮಾಣಿತ ವಿಮಾನ ನಿಯಂತ್ರಣ ಕೊಠಡಿಯನ್ನು ಒಳಗೊಂಡಿದೆ. ಇದು ಮುಖ್ಯವಾಗಿ ವಿಮಾನ ಹಾರಾಟ ಕ್ಲಬ್‌ಗಳು ಮತ್ತು ವಿಮಾನ ಚಾಲಕ ತರಬೇತಿ ಶಾಲೆಗಳಿಗೆ ಸೇವೆ ಸಲ್ಲಿಸುತ್ತಿತ್ತು.

**ಹಂಸ-3 ಎನ್‌ಜಿ (ಹೊಸ ಪೀಳಿಗೆ):** ಇದು ಹಂಸ-3 ರ ಸುಧಾರಿತ ಆವೃತ್ತಿಯಾಗಿದ್ದು, ಈ ಕೆಳಗಿನ ಪ್ರಮುಖ ವೈಶಿಷ್ಟ್ಯಗಳನ್ನು ಹೊಂದಿದೆ:

1. **ಡಿಜಿಟಲ್ ಗಾಜಿನ ವಿಮಾನ ನಿಯಂತ್ರಣ ಕೊಠಡಿ:** ಉತ್ತಮ ಸಾಂದರ್ಭಿಕ ಅರಿವಿಗಾಗಿ ಹಳೆಯ ಸಂಕೇತ ಆಧಾರಿತ ಉಪಕರಣಗಳನ್ನು ಇದು ಬದಲಾಯಿಸುತ್ತದೆ.
2. **ಹೆಚ್ಚಿದ ಇಂಧನ ಸಾಮರ್ಥ್ಯ:** ಇದು ದೀರ್ಘಾವಧಿಯ ತರಬೇತಿ ಹಾರಾಟಗಳಿಗೆ ಮತ್ತು ಹೆಚ್ಚಿನ ಸಹನೆಗೆ ಅನುವು ಮಾಡಿಕೊಡುತ್ತದೆ.
3. **ಸ್ಥಿರ ಹಾರಾಟ ನಿರ್ವಹಣೆ:** ಕನಿಷ್ಠ ಮಟ್ಟದ ವೇಗ ಮತ್ತು ಊಹಿಸಬಹುದಾದ ನಡವಳಿಕೆಯು ಇದನ್ನು ಆರಂಭಿಕ ಹಂತದ ತರಬೇತಿಗೆ ಸೂಕ್ತವಾಗಿಸುತ್ತದೆ.

## ಆಹಾರ ಮತ್ತು ಕೃಷಿಗಾಗಿ ಸಸ್ಯ ತಳಿ ಸಂಪನ್ಮೂಲಗಳ ಮೇಲಿನ ಅಂತರರಾಷ್ಟ್ರೀಯ ಒಪ್ಪಂದ (ITPGRFA)

**(ಸಾಮಾನ್ಯ ಅಧ್ಯಯನ 3/ ಕೃಷಿ)**

**ಇದೀಗ ಸುದ್ದಿಯಲ್ಲಿದೆ:**

- ಇತ್ತೀಚೆಗೆ, **ಪೆರುವಿನ ಲಿಮಾದಲ್ಲಿ** 'ಆಹಾರ ಮತ್ತು ಕೃಷಿಗಾಗಿ ಸಸ್ಯ ತಳಿ ಸಂಪನ್ಮೂಲಗಳ ಮೇಲಿನ ಅಂತರರಾಷ್ಟ್ರೀಯ ಒಪ್ಪಂದ'ದ (ITPGRFA) ಆಡಳಿತ ಮಂಡಳಿಯ 11ನೇ ಸಭೆಯು ಮುಕ್ತಾಯಗೊಂಡಿತು. ಆದರೆ, **'ಪ್ರಮಾಣಿತ ವಸ್ತು ವರ್ಗಾವಣೆ ಒಪ್ಪಂದ'** (SMTA) ದ ಅಡಿಯಲ್ಲಿ ಬರುವ ಬೆಳೆಗಳ ಪಟ್ಟಿಯನ್ನು ವಿಸ್ತರಿಸುವ ವಿಷಯದಲ್ಲಿ ಯಾವುದೇ ಒಮ್ಮತ ಮೂಡಲಿಲ್ಲ.

**ಪ್ರಮುಖ ಅಂಶಗಳು:**

- **ಭಾರತದ ವಿರೋಧ:** 'ಬಹುಪಕ್ಷೀಯ ವ್ಯವಸ್ಥೆ'ಯನ್ನು ಎಲ್ಲಾ ಬೆಳೆಗಳಿಗೆ ವಿಸ್ತರಿಸುವ ಮತ್ತು ಲಾಭ-ಹಂಚಿಕೆ ನಿಯಮಗಳನ್ನು ಪರಿಷ್ಕರಿಸುವ ಪ್ರಸ್ತಾಪವನ್ನು ಭಾರತ ಮತ್ತು ಇತರ ಕೆಲವು ದೇಶಗಳು ಬಲವಾಗಿ ವಿರೋಧಿಸಿದವು. ಈ ಕ್ರಮವು ಬೀಜ ವೈವಿಧ್ಯತೆಯ ಮೇಲಿನ **ರಾಷ್ಟ್ರೀಯ ಸಾರ್ವಭೌಮತ್ವವನ್ನು** ದುರ್ಬಲಗೊಳಿಸಬಹುದು ಎಂಬುದು ಅವುಗಳ ವಾದವಾಗಿದೆ.
- **ಪ್ರಮಾಣಿತ ವಸ್ತು ವರ್ಗಾವಣೆ ಒಪ್ಪಂದ (SMTA) ದ ನಿಯಮಗಳು:** ಪ್ರಸ್ತುತ SMTA ಅಡಿಯಲ್ಲಿ, **64 ಬೆಳೆಗಳ ತಳಿ** (ಆನುವಂಶಿಕ) ವಸ್ತುವು ಕೇವಲ ಒಪ್ಪಂದದ **ಸದಸ್ಯ ರಾಷ್ಟ್ರಗಳಿಗೆ** ಮಾತ್ರ ಲಭ್ಯವಿರುತ್ತದೆ. ಇದನ್ನು ಪ್ರತ್ಯೇಕವಾಗಿ **ಸಂಶೋಧನೆ, ತಳಿ ಅಭಿವೃದ್ಧಿ** ಮತ್ತು **ತರಬೇತಿಗಾಗಿ** ಮಾತ್ರ ಬಳಸಿಕೊಳ್ಳಬಹುದಾಗಿದೆ.
- **ಬೌದ್ಧಿಕ ಆಸ್ತಿ ಹಕ್ಕುಗಳ (IPR) ನಿರ್ಬಂಧ:** ಆನುವಂಶಿಕ ವಸ್ತುಗಳನ್ನು ಸ್ವೀಕರಿಸುವವರು, ತಾವು ಪಡೆದ ಮೂಲ ರೂಪದ ವಸ್ತುವಿನ ಮೇಲೆ 'ಬೌದ್ಧಿಕ ಆಸ್ತಿ ಹಕ್ಕುಗಳನ್ನು' (IPR) ಪ್ರತಿಪಾದಿಸುವಂತಿಲ್ಲ. ಅಲ್ಲದೆ, ಒಪ್ಪಂದದ ನಾಲ್ಕು ಲಾಭ-ಹಂಚಿಕೆ ಕಾರ್ಯವಿಧಾನಗಳ ಮೂಲಕ ಅದರಿಂದ ಬರುವ ಲಾಭಗಳನ್ನು ಕಡ್ಡಾಯವಾಗಿ ಹಂಚಿಕೊಳ್ಳಬೇಕು.

**ಆಹಾರ ಮತ್ತು ಕೃಷಿಗಾಗಿ ಸಸ್ಯ ತಳಿ ಸಂಪನ್ಮೂಲಗಳ ಮೇಲಿನ ಅಂತರರಾಷ್ಟ್ರೀಯ ಒಪ್ಪಂದ (ITPGRFA) ದ ಬಗ್ಗೆ:**

- ಇದು **ಕಾನೂನು ಬದ್ಧವಾಗಿರುವ ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆಯ** (FAO) ಒಂದು ಒಪ್ಪಂದವಾಗಿದೆ. ಇದನ್ನು 2001 ರಲ್ಲಿ ಅಂಗೀಕರಿಸಲಾಯಿತು ಮತ್ತು **2004 ರಿಂದ ಜಾರಿಗೆ** ಬಂದಿತು.
- ಉದ್ದೇಶ: **ಆಹಾರ ಮತ್ತು ಕೃಷಿಗಾಗಿ ಸಸ್ಯ ತಳಿ (ಆನುವಂಶಿಕ) ಸಂಪನ್ಮೂಲಗಳ (PGRFA) ಸಂರಕ್ಷಣೆ, ಸುಸ್ಥಿರ ಬಳಕೆ** ಮತ್ತು ಅವುಗಳ ಬಳಕೆಯಿಂದ ಬರುವ **ಲಾಭಗಳ ನ್ಯಾಯಯುತ ಹಂಚಿಕೆ** ಇದರ ಪ್ರಮುಖ ಗುರಿಯಾಗಿದೆ.
- ಇದು **"ಜೀವ ವೈವಿಧ್ಯತೆ ಸಮಾವೇಶ (CBD) ಮತ್ತು ನಗೋಯಾ ಶಿಷ್ಟಾಚಾರ"ಗಳಿಗೆ** ಪೂರಕವಾಗಿ ಕಾರ್ಯನಿರ್ವಹಿಸುತ್ತದೆ.

## ಹಣಕಾಸಿನ ಒಳಗೊಳ್ಳುವಿಕೆಗಾಗಿ ರಾಷ್ಟ್ರೀಯ ಕಾರ್ಯತಂತ್ರ 2025–30

(ಸಾಮಾನ್ಯ ಅಧ್ಯಯನ - 3/ ಆರ್ಥಿಕತೆ)

**ಇದೀಗ ಸುದ್ದಿಯಲ್ಲಿದೆ :**

- **ಭಾರತೀಯ ರಿಸರ್ವ್ ಬ್ಯಾಂಕ್ (RBI)** ಇತ್ತೀಚೆಗೆ **'ಹಣಕಾಸಿನ ಒಳಗೊಳ್ಳುವಿಕೆಗಾಗಿ ರಾಷ್ಟ್ರೀಯ ಕಾರ್ಯತಂತ್ರ' (NSFI) 2025–30** ಅನ್ನು ಬಿಡುಗಡೆ ಮಾಡಿದೆ. ಇದು ಭಾರತದಲ್ಲಿ

INSTA KAS

ಹಣಕಾಸಿನ ಒಳಗೊಳ್ಳುವಿಕೆಯನ್ನು ಮತ್ತಷ್ಟು ಹೆಚ್ಚಿಸಲು ಮತ್ತು ವಿಸ್ತರಿಸಲು **'ಪಂಚ-ಜ್ಯೋತಿ' ಎಂಬ ಐದು ವರ್ಷಗಳ ಯೋಜನೆಯನ್ನು** ರೂಪಿಸಿದೆ.

**'ಪಂಚ-ಜ್ಯೋತಿ'ಯ ಕಾರ್ಯತಂತ್ರದ ಸ್ತಂಭಗಳು**

1. **ಹಣಕಾಸು ಸೇವೆಗಳನ್ನು ಹೆಚ್ಚಿಸುವುದು:** ಕುಟುಂಬಗಳು ಮತ್ತು ಕಿರು-ಉದ್ಯಮಗಳಿಗೆ ಸಮಾನ, ಜವಾಬ್ದಾರಿಯುತ ಮತ್ತು ಕೈಗೆಟುಕುವ ದರದಲ್ಲಿ ಹಣಕಾಸು ಸೇವೆಗಳನ್ನು ಒದಗಿಸುವುದು.
2. **ಲಿಂಗ-ಸೂಕ್ಷ್ಮ ಒಳಗೊಳ್ಳುವಿಕೆ :** ಮಹಿಳಾ ಕೇಂದ್ರಿತ ತಂತ್ರಗಳನ್ನು ಅನುಷ್ಠಾನಗೊಳಿಸುವುದು ಹಾಗೂ ದುರ್ಬಲ ಮತ್ತು ಕಡಿಮೆ ಸೇವೆಗಳನ್ನು ಪಡೆಯುವ ಗುಂಪುಗಳಿಗೆ ಬೆಂಬಲ ನೀಡುವುದು.
3. **ಜೀವನೋಪಾಯ ಮತ್ತು ಹಣಕಾಸು ಸಂಯೋಜನೆ** : ಕೌಶಲ್ಯ ಅಭಿವೃದ್ಧಿ ಮತ್ತು ಜೀವನೋಪಾಯ ಕಾರ್ಯಕ್ರಮಗಳನ್ನು ಔಪಚಾರಿಕ ಹಣಕಾಸು ಸೇವೆಗಳೊಂದಿಗೆ ಸಂಯೋಜಿಸುವುದು.
4. **ಹಣಕಾಸು ಶಿಕ್ಷಣ :** ಜವಾಬ್ದಾರಿಯುತ ಆರ್ಥಿಕ ನಡವಳಿಕೆ ಮತ್ತು ಶಿಸ್ತನ್ನು ಉತ್ತೇಜಿಸಲು 'ಹಣಕಾಸು ಸಾಕ್ಷರತೆ'ಯನ್ನು ಬಳಸಿಕೊಳ್ಳುವುದು.
5. **ಗ್ರಾಹಕ ರಕ್ಷಣೆ :** ವ್ಯವಸ್ಥೆಯಲ್ಲಿ ಉತ್ತಮ ವಿಶ್ವಾಸಾರ್ಹತೆ ಮತ್ತು ಲಭ್ಯತೆಯನ್ನು ತರಲು ಗ್ರಾಹಕ ರಕ್ಷಣೆ ಮತ್ತು ಕುಂದುಕೊರತೆ ಪರಿಹಾರ ಕಾರ್ಯವಿಧಾನಗಳನ್ನು ಬಲಪಡಿಸುವುದು.

**ಹಣಕಾಸಿನ ಒಳಗೊಳ್ಳುವಿಕೆಗಾಗಿ ಸರ್ಕಾರದ ಪ್ರಮುಖ ಉಪಕ್ರಮಗಳು**

- **ಪ್ರಧಾನ ಮಂತ್ರಿ ಮುದ್ರಾ ಯೋಜನೆ:** ಸಣ್ಣ ಮತ್ತು ಕಿರು ಉದ್ಯಮಗಳಿಗೆ ₹10 ಲಕ್ಷದವರೆಗೆ ಸಾಲ ನೀಡುವ ಮೂಲಕ ಬೆಂಬಲಿಸಲು ಇದನ್ನು 2015 ರಲ್ಲಿ ಪ್ರಾರಂಭಿಸಲಾಯಿತು.
- **ಹಣಕಾಸಿನ ಒಳಗೊಳ್ಳುವಿಕೆ ಸೂಚ್ಯಂಕ :** ಹಣಕಾಸು ಸೇವೆಗಳ ಲಭ್ಯತೆಯನ್ನು ಖಾತ್ರಿಪಡಿಸುವ ಪ್ರಕ್ರಿಯೆಯನ್ನು ಪತ್ತೆಹಚ್ಚಲು ಇದನ್ನು ಭಾರತೀಯ ರಿಸರ್ವ್ ಬ್ಯಾಂಕ್ ಪ್ರಾರಂಭಿಸಿದೆ.
- **ಪ್ರಧಾನ ಮಂತ್ರಿ ಸುರಕ್ಷಾ ವಿಮಾ ಯೋಜನೆ:** 2015 ರಲ್ಲಿ ಪ್ರಾರಂಭಿಸಲಾದ ಈ ಯೋಜನೆಯು ಸಾವು ಮತ್ತು ಅಂಗವೈಕಲ್ಯವನ್ನು ಒಳಗೊಳ್ಳುವ ಒಂದು ಅಪಘಾತ ವಿಮಾ ಯೋಜನೆಯಾಗಿದೆ.
- **ಪ್ರಧಾನ ಮಂತ್ರಿ ಜೀವನ ಜ್ಯೋತಿ ವಿಮಾ ಯೋಜನೆ:** 2015 ರಲ್ಲಿ ಪ್ರಾರಂಭಿಸಲಾದ ಇದು ಸರ್ಕಾರದ ಬೆಂಬಲಿತ ಜೀವ ವಿಮಾ ಯೋಜನೆಯಾಗಿದೆ.
- **ಅಟಲ್ ಪಿಂಚಣಿ ಯೋಜನೆ :** 2015 ರಲ್ಲಿ ಪ್ರಾರಂಭಿಸಲಾದ ಈ ಯೋಜನೆಯು ಅಸಂಘಟಿತ ವಲಯದ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸುತ್ತದೆ.
- **ಪ್ರಧಾನ ಮಂತ್ರಿ ಜನ ಧನ್ ಯೋಜನೆ:** ಇದನ್ನು 2014 ರಲ್ಲಿ ಪ್ರಾರಂಭವಾಯಿತು. ಬ್ಯಾಂಕ್ ಖಾತೆ ಹೊಂದಿಲ್ಲದವರನ್ನು ಔಪಚಾರಿಕ ಆರ್ಥಿಕ ವ್ಯವಸ್ಥೆಯೊಳಗೆ ತರುವುದು, ಉಳಿತಾಯ ಖಾತೆಗಳು, ಸಾಲ ಸೌಲಭ್ಯ, ಹಣ ರವಾನೆ, ವಿಮೆ ಮತ್ತು ಪಿಂಚಣಿಗಳಿಗೆ ಪ್ರವೇಶವನ್ನು ಒದಗಿಸುವುದು ಇದರ ಗುರಿಯಾಗಿದೆ

## ಜೈವಿಕ ಶಸ್ತ್ರಾಸ್ತ್ರಗಳ ಸಮಾವೇಶ ( BWC)

(ಸಾಮಾನ್ಯ ಅಧ್ಯಯನ- 2/ಭಾರತದ ಹಿತಾಸಕ್ತಿಯಲ್ಲಿ ಜಾಗತಿಕ ಗುಂಪುಗಾರಿಕೆ ; ಸಾಮಾನ್ಯ ಅಧ್ಯಯನ-3/ಭದ್ರತೆ)

**ಇದೀಗ ಸುದ್ದಿಯಲ್ಲಿದೆ :**

- **'ಜೈವಿಕ ಶಸ್ತ್ರಾಸ್ತ್ರಗಳ ಸಮಾವೇಶ' (BWC) ಜಾರಿಗೆ ಬಂದು 50 ವರ್ಷಗಳು ಪೂರ್ಣಗೊಂಡಿವೆ.**

**ಜೈವಿಕ ಭಯೋತ್ಪಾದನೆಯ ಬಗ್ಗೆ**

- **ವ್ಯಾಖ್ಯಾನ:** ಮಾನವರು, ಪ್ರಾಣಿಗಳು ಅಥವಾ ಸಸ್ಯಗಳಲ್ಲಿ ಅನಾರೋಗ್ಯ ಅಥವಾ ಸಾವನ್ನು ಉಂಟುಮಾಡುವ ಉದ್ದೇಶದಿಂದ ಬ್ಯಾಕ್ಟೀರಿಯಾ, ವೈರಸ್‌ಗಳು ಅಥವಾ ಜೀವಾಣು ವಿಷಗಳಂತಹ ಜೈವಿಕ ಕಾರಕಗಳನ್ನು ಉದ್ದೇಶಪೂರ್ವಕವಾಗಿ ಬಿಡುಗಡೆ ಮಾಡುವುದನ್ನು 'ಜೈವಿಕ ಭಯೋತ್ಪಾದನೆ' ಎನ್ನಲಾಗುತ್ತದೆ.
- **ಉದಾಹರಣೆಗಳು:** *ಬ್ಯಾಸಿಲಸ್ ಆಂಥ್ರಾಸಿಸ್* (ಆಂಥ್ರಾಕ್ಸ್), *ವೇರಿಯೋಲಾ ಮೇಜರ್* (ಸಿಡುಬು), ಮತ್ತು ಬೊಟುಲಿನಮ್‌ನಂತಹ ವಿಷಕಾರಿಗಳು.

INSTA KAS

- **ನಿಯಂತ್ರಣ:** ಜೈವಿಕ ಶಸ್ತ್ರಾಸ್ತ್ರಗಳ ಅಭಿವೃದ್ಧಿ, ಉತ್ಪಾದನೆ ಮತ್ತು ಸ್ವಾಧೀನವನ್ನು ನಿಷೇಧಿಸುವ ಪ್ರಮುಖ ಅಂತರರಾಷ್ಟ್ರೀಯ ಒಪ್ಪಂದವಾಗಿ 'ಜೈವಿಕ ಶಸ್ತ್ರಾಸ್ತ್ರಗಳ ಸಮಾವೇಶ' ಕಾರ್ಯನಿರ್ವಹಿಸುತ್ತದೆ.

**'ಜೈವಿಕ ಶಸ್ತ್ರಾಸ್ತ್ರಗಳ ಸಮಾವೇಶ'ದ ಬಗ್ಗೆ**

- **ಸ್ಥಾಪನೆ:** ಈ ಒಪ್ಪಂದವು **ಮಾರ್ಚ್ 26, 1975** ರಂದು ಜಾರಿಗೆ ಬಂದಿತು.
- **ವೈಶಿಷ್ಟ್ಯ :** ಇದು ಸಾಮೂಹಿಕ ವಿನಾಶದ ಶಸ್ತ್ರಾಸ್ತ್ರಗಳ ಒಂದು ಸಂಪೂರ್ಣ ವರ್ಗವನ್ನೇ ನಿಷೇಧಿಸಿದ ವಿಶ್ವದ ಮೊಟ್ಟಮೊದಲ ಬಹುಪಕ್ಷೀಯ ನಿರಸ್ತ್ರೀಕರಣ ಒಪ್ಪಂದವಾಗಿದೆ.
- **ಉದ್ದೇಶ :** ಇದು ಜೈವಿಕ ಮತ್ತು ವಿಷಕಾರಿ ಶಸ್ತ್ರಾಸ್ತ್ರಗಳ ಅಭಿವೃದ್ಧಿ, ಉತ್ಪಾದನೆ, ಸ್ವಾಧೀನಪಡಿಸಿಕೊಳ್ಳುವಿಕೆ, ವರ್ಗಾವಣೆ, ದಾಸ್ತಾನು ಮತ್ತು ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸುತ್ತದೆ.
- **ಅನುಷ್ಠಾನ : ವಿಶ್ವಸಂಸ್ಥೆಯ ನಿರಸ್ತ್ರೀಕರಣ ವ್ಯವಹಾರಗಳ ಕಚೇರಿ (UNODA)** ಇದರ ಅನುಷ್ಠಾನದ ಜವಾಬ್ದಾರಿಯನ್ನು ನಿರ್ವಹಿಸುತ್ತದೆ.
- **ಸದಸ್ಯತ್ವ: ಭಾರತ ಸೇರಿದಂತೆ ಒಟ್ಟು 189 ದೇಶಗಳು** ಇದರ ಸದಸ್ಯತ್ವವನ್ನು ಹೊಂದಿವೆ.

## ಕೇಂದ್ರ ಅಬಕಾರಿ (ತಿದ್ದುಪಡಿ) ಮಸೂದೆ, 2025

(ಸಾಮಾನ್ಯ ಅಧ್ಯಯನ : 2/ ರಾಜಕೀಯ ಮತ್ತು ಆಡಳಿತ)

**ಇದೀಗ ಸುದ್ದಿಯಲ್ಲಿದೆ :**

- **'ಕೇಂದ್ರ ಅಬಕಾರಿ (ತಿದ್ದುಪಡಿ) ಮಸೂದೆ, 2025'** ಅನ್ನು **ಡಿಸೆಂಬರ್ 1, 2025** ರಂದು **ಲೋಕಸಭೆಯಲ್ಲಿ ಮಂಡಿಸಲಾಯಿತು.**

**ಕೇಂದ್ರ ಅಬಕಾರಿ (ತಿದ್ದುಪಡಿ) ಮಸೂದೆ, 2025 ರ ಪ್ರಮುಖ ಅಂಶಗಳು**

- ಈ ಮಸೂದೆಯು **'ಕೇಂದ್ರ ಅಬಕಾರಿ ಕಾಯಿದೆ, 1944'** ಅನ್ನು ತಿದ್ದುಪಡಿ ಮಾಡುವ ಉದ್ದೇಶವನ್ನು ಹೊಂದಿದೆ.
- ಭಾರತದಲ್ಲಿ ಉತ್ಪಾದನೆಯಾದ ಅಥವಾ ತಯಾರಾದ ಸರಕುಗಳ ಮೇಲೆ ಕೇಂದ್ರ ಅಬಕಾರಿ ಸುಂಕಗಳನ್ನು ವಿಧಿಸಲು ಮತ್ತು ಸಂಗ್ರಹಿಸಲು 1944ರ ಕಾಯಿದೆ ಅವಕಾಶ ಕಲ್ಪಿಸುತ್ತದೆ.
- ಈ ಮಸೂದೆಯು ತಯಾರಿಸದ ತಂಬಾಕು, ತಯಾರಿಸಿದ ತಂಬಾಕು, ತಂಬಾಕು ಉತ್ಪನ್ನಗಳು ಮತ್ತು ತಂಬಾಕು ಪರ್ಯಾಯಗಳ ಮೇಲಿನ ಕೇಂದ್ರ ಅಬಕಾರಿ ಸುಂಕವನ್ನು ಹೆಚ್ಚಿಸುತ್ತದೆ.
- ತಯಾರಿಸದ ತಂಬಾಕಿನ (ಉದಾಹರಣೆಗೆ ಬಿಸಿಲಿನಲ್ಲಿ ಒಣಗಿಸಿದ ತಂಬಾಕು ಎಲೆಗಳು) ಮೇಲಿನ ಸುಂಕವನ್ನು 64% ರಿಂದ 70% ಕ್ಕೆ ಹೆಚ್ಚಿಸಲಾಗಿದೆ.

## ಸಂಚಾರ್ ಸಾಥಿ ಆ್ಯಪ್

(ಸಾಮಾನ್ಯ ಅಧ್ಯಯನ- 2/ಸರ್ಕಾರದ ಉಪಕ್ರಮಗಳು)




**ಇದೀಗ ಸುದ್ದಿಯಲ್ಲಿದೆ :**

- 2026 ರ ಮಾರ್ಚ್‌ನಿಂದ ಮಾರಾಟವಾಗುವ ಮೊಬೈಲ್ ಸಾಧನಗಳಲ್ಲಿ **'ಸಂಚಾರ್ ಸಾಥಿ' ಆ್ಯಪ್ ಅನ್ನು ಕಡ್ಡಾಯವಾಗಿ ಪೂರ್ವ-ಸ್ಥಾಪಿತವಾಗಿ ಒದಗಿಸುವಂತೆ ದೂರಸಂಪರ್ಕ ಇಲಾಖೆಯು (DoT)** ಮೊಬೈಲ್ ಫೋನ್ ತಯಾರಕ ಕಂಪನಿಗಳಿಗೆ ನಿರ್ದೇಶನ ನೀಡಿದೆ.

INSTA KAS

**ಸಂಚಾರ್ ಸಾಥಿ ಆ್ಯಪ್ ನ ಬಗ್ಗೆ**

- ಪ್ರಾರಂಭಿಸಿದವರು: **ದೂರಸಂಪರ್ಕ ಇಲಾಖೆ**
- **ಉದ್ದೇಶ:** ಮೊಬೈಲ್ ಸಂಬಂಧಿತ ವಂಚನೆ ಮತ್ತು ಕಳ್ಳತನದಿಂದ ರಕ್ಷಣೆ ಪಡೆಯಲು ಹಾಗೂ ಈ ಕುರಿತು ವರದಿ ಮಾಡಲು ಬಳಕೆದಾರರಿಗೆ ನೆರವಾಗುವುದು.

**ಸಂಚಾರ್ ಸಾಥಿ ಆ್ಯಪ್ ನ ಪ್ರಮುಖ ಲಕ್ಷಣಗಳು**

1. **ಚಕ್ಷು** : ನಕಲಿ ಕೆವೈಸಿ (KYC) ನವೀಕರಣಗಳಂತಹ ವಂಚನೆಗಳನ್ನು ಒಳಗೊಂಡಂತೆ, ಕರೆಗಳು, ಎಸ್‌ಎಂಎಸ್ ಅಥವಾ ವಾಟ್ಸಾಪ್ ಮೂಲಕ ನಡೆಯುವ ಶಂಕಿತ ವಂಚನೆಗಳನ್ನು ವರದಿ ಮಾಡಲು ಇದು ಬಳಕೆದಾರರಿಗೆ ಅನುವು ಮಾಡಿಕೊಡುತ್ತದೆ.
2. **IMEI ಟ್ರ್ಯಾಕಿಂಗ್ ಮತ್ತು ಬ್ಲಾಕಿಂಗ್:** ಕಳೆದುಹೋದ ಅಥವಾ ಕಳ್ಳತನವಾದ ಫೋನ್‌ಗಳನ್ನು ದೇಶಾದ್ಯಂತ ಎಲ್ಲಾ ಟೆಲಿಕಾಂ ನೆಟ್‌ವರ್ಕ್‌ಗಳಲ್ಲಿ ಪತ್ತೆಹಚ್ಚಲು ಮತ್ತು ಬ್ಲಾಕ್ ಮಾಡಲು ಇದು ಸಹಾಯ ಮಾಡುತ್ತದೆ.
3. **ಮೊಬೈಲ್ ಹ್ಯಾಂಡ್‌ಸೆಟ್ ನೈಜತೆಯನ್ನು ಪರಿಶೀಲಿಸುವುದು :** IMEI ಸಂಖ್ಯೆ ಅಥವಾ ಬಾರ್‌ಕೋಡ್ ಸ್ಕ್ಯಾನ್ ಬಳಸುವ ಮೂಲಕ ಮೊಬೈಲ್ ಸಾಧನವು ಅಸಲಿಯೇ ಎಂಬುದನ್ನು ಬಳಕೆದಾರರು ಪರಿಶೀಲಿಸಬಹುದು.
4. **ಮರೆಮಾಚಲಾದ ಅಂತರರಾಷ್ಟ್ರೀಯ ಕರೆಗಳನ್ನು ವರದಿ ಮಾಡುವುದು** : ಸ್ಥಳೀಯ ಸಂಖ್ಯೆಯಂತೆ (+91 ನಂತರ 10 ಅಂಕಿಗಳು) ಗೋಚರಿಸುವ ವಿದೇಶಿ ಕರೆಗಳನ್ನು ಗುರುತಿಸಲು ಮತ್ತು ವರದಿ ಮಾಡಲು ಇದು ಸಹಾಯ ಮಾಡುತ್ತದೆ.
5. **ನಿಮ್ಮ ಇಂಟರ್ನೆಟ್ ಸೇವಾ ಪೂರೈಕೆದಾರರನ್ನು ತಿಳಿಯಿರಿ:** ಪಿನ್ ಕೋಡ್, ವಿಳಾಸ ಅಥವಾ ಹೆಸರಿನ ಮೂಲಕ ವೈರ್‌ಲೈನ್ ಇಂಟರ್ನೆಟ್ ಸೇವಾ ಪೂರೈಕೆದಾರರನ್ನು ಹುಡುಕಲು ಇದು ಸಹಕಾರಿಯಾಗಿದೆ.

## ಪ್ರಧಾನ ಮಂತ್ರಿ ವಿರಾಸತ್ ಕಾ ಸಂವರ್ಧನ್ (PM VIKAS)

(ಸಾಮಾನ್ಯ ಅಧ್ಯಯನ-2/ಕಲ್ಯಾಣ ಯೋಜನೆಗಳು)

**ಇದೀಗ ಸುದ್ದಿಯಲ್ಲಿದೆ :**

- 'ಪಿಎಂ ವಿಕಾಸ್' ಯೋಜನೆಯು ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆಯನ್ನು ಉತ್ತೇಜಿಸುವ ಮೂಲಕ ಅಲ್ಪಸಂಖ್ಯಾತ ಸಮುದಾಯಗಳ ಏಳಿಗೆಗೆ ಶ್ರಮಿಸುತ್ತಿದೆ.

**ಪ್ರಧಾನ ಮಂತ್ರಿ ವಿರಾಸತ್ ಕಾ ಸಂವರ್ಧನ್ ಯೋಜನೆಯ ಕುರಿತು**

- **ಹಣಕಾಸು ನೆರವು** : ಇದೊಂದು **ಕೇಂದ್ರ ವಲಯದ ಯೋಜನೆಯಾಗಿದೆ.**
- **ಅನುಷ್ಠಾನ:** ಕೇಂದ್ರದ **ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯ** ಇದನ್ನು ಅನುಷ್ಠಾನಗೊಳಿಸುತ್ತಿದೆ.
- **ಯೋಜನೆಗಳ ವಿಲೀನ:** ಈ ಯೋಜನೆಯು **ಹಿಂದಿನ ಐದು ಯೋಜನೆಗಳಾದ 'ಸೀಖೋ ಔರ್ ಕಮಾವೋ', 'ನೈ ಮಂಜಿಲ್', 'ನೈ ರೋಶ್ನಿ', 'ಉಸ್ತಾದ್' ಮತ್ತು 'ಹಮಾರಿ ಧರೋಹರ್' ಯೋಜನೆಗಳನ್ನು ಸಂಯೋಜಿಸುತ್ತದೆ.**
- **ಗುರಿಗಳು** : ಇದು ಕೌಶಲ್ಯಾಭಿವೃದ್ಧಿಯ ಮೂಲಕ ಆರು ಅಧಿಸೂಚಿತ ಅಲ್ಪಸಂಖ್ಯಾತ ಸಮುದಾಯಗಳ ಉನ್ನತೀಕರಣ; ಅಲ್ಪಸಂಖ್ಯಾತ ಮಹಿಳೆಯರಲ್ಲಿ ಉದ್ಯಮಶೀಲತೆ ಮತ್ತು ನಾಯಕತ್ವ; ಹಾಗೂ ಶಾಲೆಯಿಂದ ಹೊರಗುಳಿದವರಿಗೆ ಶೈಕ್ಷಣಿಕ ಬೆಂಬಲವನ್ನು ಒದಗಿಸುವುದರತ್ತ ಗಮನಹರಿಸುತ್ತದೆ.

**ನಿಮಗೆ ತಿಳಿದಿದೆಯೇ?**

- ಭಾರತದಲ್ಲಿ ಸಾಮಾಜಿಕ-ಆರ್ಥಿಕ ರಂಗಗಳಲ್ಲಿ ಅಧಿಕೃತವಾಗಿ ಗುರುತಿಸಲ್ಪಟ್ಟ **ಆರು ಅಲ್ಪಸಂಖ್ಯಾತ ಗುಂಪುಗಳೆಂದರೆ —> ಮುಸ್ಲಿಮರು, ಕ್ರೈಸ್ತರು, ಸಿಖ್ಖರು, ಬೌದ್ಧರು, ಜೈನರು ಮತ್ತು ಜೊರಾಸ್ಟ್ರಿಯನ್ನರು (ಪಾರ್ಸಿಗಳು).**

## ಹೆರಾನ್ ಎಂಕೆ II ಮಾನವರಹಿತ ವೈಮಾನಿಕ ವಾಹನಗಳು (Heron Mk II UAVs)

(ಸಾಮಾನ್ಯ ಅಧ್ಯಯನ-3/ ರಕ್ಷಣೆ)



**ಇದೀಗ ಸುದ್ದಿಯಲ್ಲಿದೆ :**

- 'ಆಪರೇಷನ್ ಸಿಂಧೂರ್' ನ ನಂತರ ಜಾರಿಗೊಳಿಸಲಾದ ತುರ್ತು ಉಪಬಂಧಗಳ ಅಡಿಯಲ್ಲಿ, **ಇಸ್ರೇಲ್‌ನಿಂದ ಹೆರಾನ್ ಎಂಕೆ-II ಡ್ರೋನ್**‌ಗಳನ್ನು ಖರೀದಿಸಲು ಭಾರತವು ಪ್ರಕ್ರಿಯೆಯನ್ನು ಆರಂಭಿಸಿದೆ.

**ಹೆರಾನ್ ಎಂಕೆ II ಯುಎವಿಗಳ ಕುರಿತು**

- **ಅಭಿವೃದ್ಧಿಪಡಿಸಿದ ಸಂಸ್ಥೆ :** ಇಸ್ರೇಲ್ ಏರೋಸ್ಪೇಸ್ ಇಂಡಸ್ಟ್ರೀಸ್.
- **ಸಾಮರ್ಥ್ಯ :** ಹೆರಾನ್ ಎಂಕೆ II ಒಂದು **'ಮಧ್ಯಮ-ಎತ್ತರದ, ದೀರ್ಘಕಾಲ ಕಾರ್ಯಾಚರಣೆ ನಡೆಸಬಲ್ಲ'** ಯುಎವಿ ಆಗಿದೆ.
- **ವೈಶಿಷ್ಟ್ಯ :** ಇದು ಸುಮಾರು **500 ಕೆಜಿಯಷ್ಟು ಪೇಲೋಡ್ ಅನ್ನು ಹೊತ್ತೊಯ್ಯುವ ಸಾಮರ್ಥ್ಯ** ಹೊಂದಿದ್ದು, **24 ಗಂಟೆಗಳಿಗೂ ಹೆಚ್ಚು ಕಾಲ ನಿರಂತರ ಹಾರಾಟ**ವನ್ನು ನಡೆಸಬಲ್ಲ ಸಾಮರ್ಥ್ಯವನ್ನು ಹೊಂದಿದೆ.

## ವಿಶೇಷಚೇತನರ ಹಕ್ಕುಗಳಿಗೆ ಭಾರತದ ಬದ್ಧತೆ

(ಸಾಮಾನ್ಯ ಅಧ್ಯಯನ-1/ ಸಮಾಜ)

**ಇದೀಗ ಸುದ್ದಿಯಲ್ಲಿದೆ :**

- **ವಿಶೇಷಚೇತನರ ಅಂತರರಾಷ್ಟ್ರೀಯ** ದಿನವನ್ನು ಪ್ರತಿವರ್ಷ **ಡಿಸೆಂಬರ್ 3** ರಂದು ಆಚರಿಸಲಾಗುತ್ತದೆ.
- **ಗುರಿ :** ವಿಶೇಷಚೇತನರ ಹಕ್ಕುಗಳು ಮತ್ತು ಯೋಗಕ್ಷೇಮವನ್ನು ಉತ್ತೇಜಿಸುವುದು.
- ಧ್ಯೇಯವಾಕ್ಯ 2025: **"ಸಾಮಾಜಿಕ ಪ್ರಗತಿಯನ್ನು ಹೆಚ್ಚಿಸಲು ವಿಶೇಷಚೇತನರನ್ನು ಒಳಗೊಂಡ ಸಮಾಜಗಳನ್ನು ಪೋಷಿಸುವುದು"**

**ವಿಶೇಷಚೇತನರ ಹಕ್ಕುಗಳಿಗೆ ಭಾರತದ ಬದ್ಧತೆ**

- ವಿಶೇಷಚೇತನರಿಗೆ ಸಮಾನ ಅವಕಾಶವನ್ನು ಖಚಿತಪಡಿಸಿಕೊಳ್ಳಲು **'ವಿಶೇಷಚೇತನರ ಹಕ್ಕುಗಳ ಸಮಾವೇಶ (2006)'** ವನ್ನು ಅಳವಡಿಸಿಕೊಳ್ಳಲಾಯಿತು.
- 2011 ರ ಜನಗಣತಿಯ ಪ್ರಕಾರ, ಭಾರತದಲ್ಲಿ 2.68 ಕೋಟಿ ವಿಶೇಷಚೇತನರಿದ್ದಾರೆ , ಇದು ಭಾರತದ ಒಟ್ಟು ಜನಸಂಖ್ಯೆಯ ಶೇಕಡಾ 2.21 ಆಗಿದೆ.

**ಸಾಂವಿಧಾನಿಕ ಉಪಬಂಧಗಳು**

- **ವಿಧಿ 21 :** ಇದು ಜೀವಿಸುವ ಹಕ್ಕು ಮತ್ತು ವೈಯಕ್ತಿಕ ಸ್ವಾತಂತ್ರ್ಯವನ್ನು ಖಾತರಿಪಡಿಸುತ್ತದೆ, ಇದು ಘನತೆಯಿಂದ ಬದುಕುವ ಹಕ್ಕನ್ನು ಒಳಗೊಂಡಿದೆ.
- **ವಿಧಿ 41 :** ನಿರುದ್ಯೋಗ, ವೃದ್ಧಾಪ್ಯ, ಅನಾರೋಗ್ಯ ಮತ್ತು ಅಂಗವೈಕಲ್ಯದ ಸಂದರ್ಭಗಳಲ್ಲಿ ಕೆಲಸ, ಶಿಕ್ಷಣ ಮತ್ತು ಸಾರ್ವಜನಿಕ ನೆರವಿನ ಹಕ್ಕನ್ನು ಇದು ಒಳಗೊಂಡಿದೆ.
- **ಏಳನೇ ಅನುಸೂಚಿ :** ಸಂವಿಧಾನದ ರಾಜ್ಯ ಪಟ್ಟಿಯಲ್ಲಿ 'ವಿಶೇಷಚೇತನರು ಮತ್ತು ಅಶಕ್ತರ (ಉದ್ಯೋಗಕ್ಕೆ ಅಸಮರ್ಥರಾದವರ) ಪರಿಹಾರ' ಎಂಬ ವಿಷಯವನ್ನು ಸೇರಿಸಲಾಗಿದ್ದು, ಇದು ಈ ವಿಷಯಗಳ ಕುರಿತು ಶಾಸನ ರೂಪಿಸಲು ರಾಜ್ಯ ಸರ್ಕಾರಗಳಿಗೆ ಅಧಿಕಾರವನ್ನು ನೀಡುತ್ತದೆ.

**ಭಾರತದಲ್ಲಿ ವಿಶೇಷಚೇತನರ ಹಕ್ಕುಗಳಿಗಾಗಿ ಕಾನೂನಾತ್ಮಕ ಮತ್ತು ನೀತಿ ಚೌಕಟ್ಟು**

- **ಶಾಸನಾತ್ಮಕ ಬದಲಾವಣೆ:** 1995ರ 'ವಿಶೇಷಚೇತನರ ಕಾಯಿದೆ'ಯ ಬದಲಾಗಿ, ಹೆಚ್ಚು ಸಮಗ್ರವಾದ **'ವಿಶೇಷಚೇತನ ವ್ಯಕ್ತಿಗಳ ಹಕ್ಕುಗಳ ಕಾಯಿದೆ, 2016'** ಅನ್ನು ಜಾರಿಗೆ ತರಲಾಗಿದೆ.

- ಅಂತರರಾಷ್ಟ್ರೀಯ ಬದ್ಧತೆ: **ಭಾರತವು 'ವಿಶೇಷಚೇತನ ವ್ಯಕ್ತಿಗಳ ಹಕ್ಕುಗಳ ಕುರಿತಾದ ವಿಶ್ವಸಂಸ್ಥೆಯ ಸಮಾವೇಶ'ಕ್ಕೆ (UNCRPD) ಸಹಿದಾರ ರಾಷ್ಟ್ರವಾಗಿದೆ**. ಈ ಹಿನ್ನೆಲೆಯಲ್ಲಿ, ಸುಗಮ್ಯ ಮತ್ತು ಎಲ್ಲರನ್ನೂ ಒಳಗೊಳ್ಳುವಂತಹ ಸಮಾಜವನ್ನು ನಿರ್ಮಿಸಲು ಭಾರತ ಬದ್ಧವಾಗಿದೆ.

**ಸರ್ಕಾರದ ಉಪಕ್ರಮಗಳು ಮತ್ತು ಯೋಜನೆಗಳು**

- **ಸುಗಮ್ಯ ಭಾರತ ಅಭಿಯಾನ** : 2015 ರಲ್ಲಿ ಪ್ರಾರಂಭಿಸಲಾದ ಈ ಅಭಿಯಾನವು ವಿಶೇಷಚೇತನರು ಎದುರಿಸುತ್ತಿರುವ ದೀರ್ಘಕಾಲದ ಅಡೆತಡೆಗಳನ್ನು ಪರಿಹರಿಸುತ್ತದೆ.
- **ದಿವ್ಯಾಂಗಜನ್ ಕಾರ್ಡ್** : ಇದನ್ನು ಇ-ಟಿಕೆಟಿಂಗ್ ಫೋಟೋ ಗುರುತಿನ ಚೀಟಿ (EPICS) ಎಂದೂ ಕರೆಯಲಾಗುತ್ತದೆ. ಇದು ವಿಶೇಷಚೇತನರಿಗಾಗಿ ಇರುವ ರೈಲ್ವೆ ಗುರುತಿನ ಚೀಟಿಯಾಗಿದ್ದು, ರೈಲು ಪ್ರಯಾಣದಲ್ಲಿ ರಿಯಾಯಿತಿಗಳನ್ನು ಪಡೆಯಲು ಅನುವು ಮಾಡಿಕೊಡುತ್ತದೆ.
- **ವಿಶೇಷಚೇತನರಿಗಾಗಿ ವಿಶಿಷ್ಟ ಗುರುತಿನ ಚೀಟಿ** : ವಿಶೇಷಚೇತನರ ರಾಷ್ಟ್ರೀಯ ದತ್ತಾಂಶವನ್ನು ರಚಿಸಲು ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.
- **ಪಿಎಂ-ದಕ್ಷ್** : ಇದು ರಾಷ್ಟ್ರೀಯ ಕೌಶಲ್ಯ ಮತ್ತು ಉದ್ಯೋಗ ಪರಿಸರ ವ್ಯವಸ್ಥೆಯ ಅಡಿಯಲ್ಲಿ ವಿಕಲಚೇತನರು, ತರಬೇತಿ ಸಂಸ್ಥೆಗಳು, ಉದ್ಯೋಗದಾತರು ಮತ್ತು ಉದ್ಯೋಗ ಒಗ್ಗೂಡಿಸುವವರನ್ನು ಸಂಪರ್ಕಿಸುವ ಒಂದು ನಿಲುಗಡೆ ತಾಣವಾಗಿದೆ.
- **ಭಾರತೀಯ ಸನ್ನೆ ಭಾಷೆಯ (ISL) ಪ್ರಚಾರ:** ವಿಶೇಷಚೇತನರ ಸಬಲೀಕರಣ ಇಲಾಖೆಯ ಅಡಿಯಲ್ಲಿ 2015 ರಲ್ಲಿ ಸ್ಥಾಪಿಸಲಾದ 'ಭಾರತೀಯ ಸನ್ನೆ ಭಾಷಾ ಸಂಶೋಧನೆ ಮತ್ತು ತರಬೇತಿ ಕೇಂದ್ರ', ಭಾರತದಾದ್ಯಂತ ಸನ್ನೆ ಭಾಷೆಯನ್ನು ಮುನ್ನಡೆಸಲು ನೋಡಲ್ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತದೆ.
- 2024ರಲ್ಲಿ, ಸರ್ಕಾರವು ಶ್ರವಣದೋಷವುಳ್ಳ ವಿದ್ಯಾರ್ಥಿಗಳು, ವಿಶೇಷ ಶಿಕ್ಷಕರು ಮತ್ತು ಅನುವಾದಕರಿಗಾಗಿ ಭಾರತೀಯ ಸನ್ನೆ ಭಾಷೆಯ ತರಬೇತಿಗಾಗಿಯೇ ಮೀಸಲಾದ ಡಿಟಿಎಚ್ ವಾಹಿನಿ 'ಪಿಎಂ ಇ-ವಿದ್ಯಾ ಚಾನೆಲ್ 31' ಅನ್ನು ಪ್ರಾರಂಭಿಸಿತು.

## ಜಿಯೋ ಪಾರ್ಸಿ ಯೋಜನೆ

(ಸಾಮಾನ್ಯ ಅಧ್ಯಯನ-1/ ಸಮಾಜ, ಸಾಮಾನ್ಯ ಅಧ್ಯಯನ-2/ ಸಾಮಾಜಿಕ ನ್ಯಾಯ)

**ಇದೀಗ ಸುದ್ದಿಯಲ್ಲಿದೆ :**

- 'ಜಿಯೋ ಪಾರ್ಸಿ ಯೋಜನೆ'ಯನ್ನು ಉತ್ತೇಜಿಸುವ ಮತ್ತು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ, ಕೇಂದ್ರದ **ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯವು** ಮುಂಬೈನಲ್ಲಿ ಸಮಗ್ರವಾದ 'ವಕಾಲತ್ತು ಮತ್ತು ಸಂಪರ್ಕ ಕಾರ್ಯಾಗಾರ'ವನ್ನು ಆಯೋಜಿಸಿತ್ತು.

**ಭಾರತದಲ್ಲಿ ಪಾರ್ಸಿ ಸಮುದಾಯದ ಸ್ಥಿತಿಗತಿ**

- **ಜನಸಂಖ್ಯೆ:** 2011 ರ ಜನಗಣತಿಯ ಪ್ರಕಾರ, ಭಾರತದಲ್ಲಿ ಪಾರ್ಸಿಗಳ ಜನಸಂಖ್ಯೆ 57,264 ಆಗಿತ್ತು.
- **ಇಳಿಕೆ:** 2001 ರ ಜನಗಣತಿಯಲ್ಲಿದ್ದ 69,601 ಕ್ಕೆ ಹೋಲಿಸಿದರೆ, ಇದು ಸರಿಸುಮಾರು **22% ರಷ್ಟು** ಗಮನಾರ್ಹ ಇಳಿಕೆಯನ್ನು ಕಂಡಿದೆ.

**ಜಿಯೋ ಪಾರ್ಸಿ ಯೋಜನೆಯ ಬಗ್ಗೆ**

- **ಪ್ರಾರಂಭ:** 2013-14 ರಲ್ಲಿ ಈ ಯೋಜನೆಯನ್ನು ಜಾರಿಗೊಳಿಸಲಾಯಿತು.
- **ಉದ್ದೇಶ** : ವೈಜ್ಞಾನಿಕ ನಡಾವಳಿ ಮತ್ತು ರಚನಾತ್ಮಕ ಮಧ್ಯಸ್ಥಿಕೆಗಳನ್ನು ಅಳವಡಿಸಿಕೊಳ್ಳುವ ಮೂಲಕ, ಪಾರ್ಸಿ ಜನಸಂಖ್ಯೆಯು ಕ್ಷೀಣಿಸುತ್ತಿರುವ ಪ್ರವೃತ್ತಿಯನ್ನು ತಡೆಗಟ್ಟುವುದು ಅಥವಾ ಹಿಮ್ಮೆಟ್ಟಿಸುವುದು ಇದರ ಪ್ರಮುಖ ಗುರಿಯಾಗಿದೆ.

**ಯೋಜನೆಯ ಮೂರು ಪ್ರಮುಖ ಘಟಕಗಳು**

1. **ವೈದ್ಯಕೀಯ ನೆರವು** : ಇದು ಬಂಜೆತನ ನಿವಾರಣಾ ಚಿಕಿತ್ಸೆಗಳಾದ ಐವಿಎಫ್ , ಐಸಿಎಸ್ಐ, ಬಾಡಿಗೆ ತಾಯ್ತನ

ಮತ್ತು ಗರ್ಭಧಾರಣೆಯ ನಂತರದ ಆರೈಕೆಗಾಗಿ ಆರ್ಥಿಕ ನೆರವನ್ನು ಒದಗಿಸುತ್ತದೆ.

2. **ವಕಾಲತ್ತು** : ಸಂತಾನೋತ್ಪತ್ತಿ ಅಥವಾ ಫಲವತ್ತತೆಯ ಸಮಸ್ಯೆಗಳನ್ನು ಎದುರಿಸುತ್ತಿರುವ ದಂಪತಿಗಳಿಗೆ ಆಪ್ತಸಮಾಲೋಚನೆಯನ್ನು ಒದಗಿಸುತ್ತದೆ.
3. **ಸಮುದಾಯದ ಆರೋಗ್ಯ** : ಮಕ್ಕಳನ್ನು ಹೊಂದಿರುವ ಪಾರ್ಸಿ ದಂಪತಿಗಳಿಗೆ ಹಾಗೂ ಅವರ ಅವಲಂಬಿತ ಹಿರಿಯ ಸದಸ್ಯರ ಪೋಷಣೆಗಾಗಿ ಮಾಸಿಕ ಆರ್ಥಿಕ ಬೆಂಬಲವನ್ನು ನೀಡುತ್ತದೆ.

## ಜಲ್ ಜೀವನ್ ಮಿಷನ್ (JJM)

(ಸಾಮಾನ್ಯ ಅಧ್ಯಯನ: 2/ಆಡಳಿತ)

**ಇದೀಗ ಸುದ್ದಿಯಲ್ಲಿದೆ :**

- ಜಲ್ ಜೀವನ್ ಮಿಷನ್ ಅಡಿಯಲ್ಲಿನ ಆರ್ಥಿಕ ಅವ್ಯವಹಾರಗಳು ಮತ್ತು ಕಳಪೆ ಗುಣಮಟ್ಟದ ಕಾಮಗಾರಿಗಳ ಕುರಿತು ಸ್ವೀಕರಿಸಲಾದ ಒಟ್ಟು ದೂರುಗಳಲ್ಲಿ, **ಉತ್ತರ ಪ್ರದೇಶವು** ಅತಿ ಹೆಚ್ಚು (ಸುಮಾರು 84% ರಷ್ಟು) ದೂರುಗಳನ್ನು ವರದಿ ಮಾಡಿದೆ.

**ಜಲ್ ಜೀವನ್ ಮಿಷನ್ ನ ಬಗ್ಗೆ**

- **ಪ್ರಾರಂಭ:** ಈ ಯೋಜನೆಯನ್ನು **2019** ರಲ್ಲಿ ಪ್ರಾರಂಭಿಸಲಾಯಿತು.
- **ಉದ್ದೇಶ** : ಪ್ರತಿ ಗ್ರಾಮೀಣ ಕುಟುಂಬಕ್ಕೆ **'ಕಾರ್ಯಾತ್ಮಕ ನಳ ನೀರು ಸಂಪರ್ಕ'** (FHTC) ಒದಗಿಸುವುದು ಇದರ ಪ್ರಮುಖ ಉದ್ದೇಶವಾಗಿದೆ.
- **ಮಹತ್ವ** : 2024 ರ ವೇಳೆಗೆ ಎಲ್ಲಾ ಗ್ರಾಮೀಣ ಕುಟುಂಬಗಳಿಗೆ, **ತಲಾವಾರು ದಿನಕ್ಕೆ 55 ಲೀಟರ್** ಸುರಕ್ಷಿತ ಕುಡಿಯುವ ನೀರನ್ನು ಪೂರೈಸುವುದನ್ನು ಖಾತ್ರಿಪಡಿಸುವುದು.
- ಅನುಷ್ಠಾನದಲ್ಲಿನ ಸವಾಲುಗಳಿಂದಾಗಿ, ಈ ಯೋಜನೆಯ ಗಡುವನ್ನು ಈಗ **2028 ರವರೆಗೆ** ವಿಸ್ತರಿಸಲಾಗಿದೆ.
- ನೋಡಲ್ ಸಚಿವಾಲಯ : **ಜಲ ಶಕ್ತಿ ಸಚಿವಾಲಯ**
- **ಹಣಕಾಸು ಮಾದರಿ** : ಇದೊಂದು **'ಕೇಂದ್ರ ಪ್ರಾಯೋಜಿತ ಯೋಜನೆ'** ಆಗಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪಾಲುದಾರಿಕೆಯಲ್ಲಿ ನಡೆಯುತ್ತದೆ.

## ದೇಶೀಯ ವ್ಯವಸ್ಥಿತ ಮಹತ್ವದ ಬ್ಯಾಂಕುಗಳು (D-SIBs)

(ಸಾಮಾನ್ಯ ಅಧ್ಯಯನ-3/ ಆರ್ಥಿಕತೆ)

**ಇದೀಗ ಸುದ್ದಿಯಲ್ಲಿದೆ :**

- **ಭಾರತೀಯ ರಿಸರ್ವ್ ಬ್ಯಾಂಕ್ (RBI)** ಬಿಡುಗಡೆ ಮಾಡಿರುವ 2025ರ ಪಟ್ಟಿಯನ್ವಯ, **ಭಾರತೀಯ ಸ್ಟೇಟ್ ಬ್ಯಾಂಕ್, ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಐಸಿಐಸಿಐ ಬ್ಯಾಂಕ್‌ಗಳು 'ದೇಶೀಯವಾಗಿ ವ್ಯವಸ್ಥಿತ ಮಹತ್ವದ ಬ್ಯಾಂಕುಗಳಾಗಿ' (D-SIBs)** ಮುಂದುವರಿಯಲಿವೆ ಎಂದು ದೃಢಪಡಿಸಲಾಗಿದೆ.

**'ದೇಶೀಯ ವ್ಯವಸ್ಥಿತ ಮಹತ್ವದ ಬ್ಯಾಂಕುಗಳ' ಬಗ್ಗೆ**

- D-SIB ಗಳನ್ನು **"ವಿಫಲವಾಗದಷ್ಟು ಬೃಹತ್" ಬ್ಯಾಂಕುಗಳು** ಎಂದು ಪರಿಗಣಿಸಲಾಗುತ್ತದೆ.
- ಈ ಬ್ಯಾಂಕುಗಳ ಪತನವು ಸಮಗ್ರ ಹಣಕಾಸು ವ್ಯವಸ್ಥೆಯಲ್ಲಿ ಅಸ್ಥಿರತೆಯನ್ನು ಉಂಟುಮಾಡಬಲ್ಲ ಸಾಮರ್ಥ್ಯವನ್ನು ಹೊಂದಿದೆ. ಈ ಕಾರಣದಿಂದಾಗಿ, ಇವುಗಳನ್ನು **ವಿಶೇಷ ನಿಯಂತ್ರಣ ಹಾಗೂ ಉನ್ನತ ಮಟ್ಟದ ಮೇಲ್ವಿಚಾರಣೆಗೆ** ಒಳಪಡಿಸಲಾಗುತ್ತದೆ.
- **2008ರ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ನಂತರ** ಈ ಪರಿಕಲ್ಪನೆಯನ್ನು ಜಾಗತಿಕವಾಗಿ ಪರಿಚಯಿಸಲಾಯಿತು.
- ಬೇಸೆಲ್-III ಮಾರ್ಗಸೂಚಿಗಳನ್ನು ಆಧರಿಸಿ, **ಆರ್ ಬಿ ಐ 2014ರಲ್ಲಿ D-SIB ಚೌಕಟ್ಟನ್ನು ಜಾರಿಗೆ ತಂದಿತು.** ಈ ಚೌಕಟ್ಟು ಪ್ರಮುಖವಾಗಿ ಈ ಕೆಳಗಿನ ಮಾನದಂಡಗಳ ಆಧಾರದ ಮೇಲೆ ಬ್ಯಾಂಕುಗಳನ್ನು ಗುರುತಿಸುತ್ತದೆ:
  - **ಗಾತ್ರ (ಒಟ್ಟು ಆಸ್ತಿ ಅಥವಾ ವಹಿವಾಟಿನ ವ್ಯಾಪ್ತಿ)**
  - **ಪರಸ್ಪರ ಸಂಪರ್ಕ**
  - **ಪರ್ಯಾಯ ಲಭ್ಯತೆ (ಸೇವೆಗಳನ್ನು ಬದಲಿಸುವುದು ಕಷ್ಟಕರವಾಗಿರುವುದು)**
  - **ಸಂಕೀರ್ಣತೆ.**

## ಭಾರತೀಯ ಕಡಲ ಸಿದ್ಧಾಂತ 2025 ರಲ್ಲಿ ನೌಕಾಪಡೆಯ ನೂತನ ವರ್ಗೀಕರಣ

(ಸಾಮಾನ್ಯ ಅಧ್ಯಯನ- 3 / ರಕ್ಷಣೆ)

**ಇದೀಗ ಸುದ್ದಿಯಲ್ಲಿದೆ :**

- ಭಾರತೀಯ ನೌಕಾಪಡೆಯ ಮುಖ್ಯಸ್ಥರಾದ ಅಡ್ಮಿರಲ್ ದಿನೇಶ್ ತ್ರಿಪಾಠಿ ಅವರು, ನೌಕಾಪಡೆಯ ಪರಿಷ್ಕೃತ ಕಾರ್ಯತಂತ್ರದ ದಾಖಲೆಯಾದ **'ಭಾರತೀಯ ನೌಕಾಪಡೆಯ ಕಡಲ ಸಿದ್ಧಾಂತ 2025'** ಅನ್ನು ಅಧಿಕೃತವಾಗಿ ಬಿಡುಗಡೆಗೊಳಿಸಿದ್ದಾರೆ.

**ಭಾರತೀಯ ಕಡಲ ಸಿದ್ಧಾಂತದ ಬಗ್ಗೆ**

- ಇದೊಂದು ಮೂಲಭೂತ ದಾಖಲೆಯಾಗಿದ್ದು, ಭಾರತದ ಸಾರ್ವಭೌಮತ್ವದ ರಕ್ಷಣೆ ಮತ್ತು ಕಡಲ ವಾಣಿಜ್ಯ ಮಾರ್ಗಗಳ ಸುರಕ್ಷತೆಯನ್ನು ಖಚಿತಪಡಿಸುವಲ್ಲಿ **ಭಾರತೀಯ ನೌಕಾಪಡೆಗೆ ದಿಕ್ಸೂಚಿಯಂತೆ** ಮಾರ್ಗದರ್ಶನ ನೀಡುತ್ತದೆ.
- **ಹಿಂದೂ ಮಹಾಸಾಗರ ಪ್ರದೇಶ** ಹಾಗೂ ಅದರ ಆಚೆಗಿನ ಕಡಲ ವಲಯದಲ್ಲಿ ಉದ್ಭವಿಸುವ ಸವಾಲುಗಳಿಗೆ **"ಪ್ರಥಮ ಸ್ಪಂದಕ"**ನಾಗಿ ಕಾರ್ಯನಿರ್ವಹಿಸಲು ಇದು ನೌಕಾಪಡೆಯನ್ನು ಸಜ್ಜುಗೊಳಿಸುತ್ತದೆ.
- ಈ ಸಿದ್ಧಾಂತವನ್ನು ಪ್ರಪ್ರಥಮವಾಗಿ **2004ರಲ್ಲಿ** ಹೊರತರಲಾಯಿತು. ತದನಂತರ 2009ರಲ್ಲಿ ಇದನ್ನು ಪರಿಷ್ಕರಿಸಿ, **2015ರಲ್ಲಿ** ಕಾಲಕಾಲಕ್ಕೆ ತಕ್ಕಂತೆ ತಿದ್ದುಪಡಿ ಮಾಡಲಾಗಿತ್ತು.

**ಭಾರತೀಯ ಕಡಲ ಸಿದ್ಧಾಂತ 2025ರ ಪ್ರಮುಖಾಂಶಗಳು**

- **2025ರ ಈ ನೂತನ ಆವೃತ್ತಿಯು** ಬದಲಾಗುತ್ತಿರುವ ಜಾಗತಿಕ ಭೂ-ರಾಜಕೀಯ ಸನ್ನಿವೇಶ ಮತ್ತು ಭಾರತದ ವ್ಯೂಹಾತ್ಮಕ ದೃಷ್ಟಿಕೋನದಲ್ಲಿನ ಪ್ರಮುಖ ಪಲ್ಲಟಗಳನ್ನು ಪ್ರತಿಬಿಂಬಿಸುತ್ತದೆ. ಇದು ಆಧುನಿಕ ಭದ್ರತಾ ಸವಾಲುಗಳು ಮತ್ತು ರಾಷ್ಟ್ರೀಯ ಅಭಿವೃದ್ಧಿಯ ಗುರಿಗಳ ಮೇಲೆ ಹೆಚ್ಚು ಒತ್ತು ನೀಡಿದೆ.
- **"ಯುದ್ಧವೂ ಅಲ್ಲದ, ಶಾಂತಿಯೂ ಅಲ್ಲದ" ಸ್ಥಿತಿಗೆ ಅಧಿಕೃತ ಮನ್ನಣೆ:** ಇದೇ ಮೊದಲ ಬಾರಿಗೆ, ಶಾಂತಿ ಮತ್ತು ಪೂರ್ಣ ಪ್ರಮಾಣದ ಯುದ್ಧದ ನಡುವಿನ ಒಂದು ವಿಶಿಷ್ಟ ಕಾರ್ಯಾಚರಣೆಯ ಹಂತವಾಗಿ "ಯುದ್ಧವೂ ಅಲ್ಲದ, ಶಾಂತಿಯೂ ಅಲ್ಲದ" ವರ್ಗವನ್ನು ಈ ಸಿದ್ಧಾಂತವು ಅಧಿಕೃತವಾಗಿ ಗುರುತಿಸಿದೆ.
- **ಜಂಟಿ ಕಾರ್ಯಾಚರಣೆ ಮತ್ತು ಏಕೀಕರಣಕ್ಕೆ ಆದ್ಯತೆ:** ಭೂಸೇನೆ, ನೌಕಾಪಡೆ ಮತ್ತು ವಾಯುಪಡೆಗಳ ನಡುವೆ ಪರಸ್ಪರ ಕಾರ್ಯಾಚರಣಾ ಸಾಮರ್ಥ್ಯ ಮತ್ತು ಸಂಯೋಜನೆಯನ್ನು ಈ ಸಿದ್ಧಾಂತವು ಪ್ರಮುಖವಾಗಿ ಪ್ರತಿಪಾದಿಸುತ್ತದೆ.
- ಈ ಸಿದ್ಧಾಂತವು 'ವಿಕಸಿತ ಭಾರತ 2047', ಸಾಗರಮಾಲಾ, ಪಿಎಂ ಗತಿ ಶಕ್ತಿ, ಮ್ಯಾರಿಟೈಮ್ ಇಂಡಿಯಾ ವಿಷನ್ 2030, ಮ್ಯಾರಿಟೈಮ್ ಅಮೃತ ಕಾಲ ವಿಷನ್ 2047 ಮತ್ತು 'ಮಹಾಸಾಗರ್' ನಂತಹ ರಾಷ್ಟ್ರೀಯ ದೃಷ್ಟಿಕೋನಗಳೊಂದಿಗೆ ಸಂಪೂರ್ಣವಾಗಿ ಹೊಂದಾಣಿಕೆ ಹೊಂದಿದೆ.

**ಹೆಚ್ಚುವರಿ ಮಾಹಿತಿ**

- **ವಿಕಸಿತ ಭಾರತ 2047 :** ಸ್ವಾತಂತ್ರ್ಯದ 100ನೇ ವರ್ಷಾಚರಣೆಯ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ರೂಪಿಸುವ ಗುರಿ ಇದಾಗಿದೆ. ಇದು ಆರ್ಥಿಕ, ಸಾಮಾಜಿಕ ಮತ್ತು ಪರಿಸರ ಪ್ರಗತಿಯ ಮೇಲೆ ಕೇಂದ್ರೀಕೃತವಾಗಿದೆ.
- **ಸಾಗರಮಾಲಾ ಯೋಜನೆ :** ಬಂದರುಗಳ ಆಧುನೀಕರಣ, ಕರಾವಳಿ ಸಮುದಾಯಗಳ ಅಭಿವೃದ್ಧಿ ಮತ್ತು ದಕ್ಷ ಸರಕು ಸಾಗಣೆ ವ್ಯವಸ್ಥೆಯನ್ನು ರೂಪಿಸುವ ಮೂಲಕ ವೆಚ್ಚ ತಗ್ಗಿಸುವುದು ಮತ್ತು ವ್ಯಾಪಾರವನ್ನು ಉತ್ತೇಜಿಸುವುದು ಈ ಮಹತ್ವಾಕಾಂಕ್ಷಿ ಯೋಜನೆಯ ಉದ್ದೇಶವಾಗಿದೆ.
- **ಪಿಎಂ ಗತಿ ಶಕ್ತಿ :** ಆರ್ಥಿಕ ಕಾರಿಡಾರ್‌ಗಳ ನಿರ್ಮಾಣಕ್ಕಾಗಿ ಸಮಗ್ರ ಮತ್ತು ಬಹು-ಮಾದರಿಯ ಸಂಪರ್ಕ ಕಲ್ಪಿಸುವ (ರೈಲು, ರಸ್ತೆ, ಬಂದರು, ಜಲಮಾರ್ಗ, ವಿಮಾನಯಾನ) ಒಂದು ರಾಷ್ಟ್ರೀಯ ಬೃಹತ್ ಯೋಜನೆ ಇದಾಗಿದೆ.
- **ಮ್ಯಾರಿಟೈಮ್ ಇಂಡಿಯಾ ವಿಷನ್ 2030 :** 2030ರ ವೇಳೆಗೆ ಬಂದರುಗಳ ಸಾಮರ್ಥ್ಯ ಹೆಚ್ಚಳ, ಆಧುನೀಕರಣ, ಹಡಗು ನಿರ್ಮಾಣಕ್ಕೆ ಉತ್ತೇಜನ ಮತ್ತು ಕ್ರೂಸ್ ಪ್ರವಾಸೋದ್ಯಮವನ್ನು

INSTA KAS

ಅಭಿವೃದ್ಧಿಪಡಿಸಲು ಕಡಲ ವಲಯಕ್ಕೆ ರೂಪಿಸಲಾದ ಮಾರ್ಗಸೂಚಿ ಇದಾಗಿದೆ.

- **ಮ್ಯಾರಿಟೈಮ್ ಅಮೃತ ಕಾಲ ವಿಷನ್ 2047:** ಇದು MIV 2030ರ ವಿಸ್ತರಣೆಯಾಗಿದ್ದು, 2047ರ ವೇಳೆಗೆ ಭಾರತವನ್ನು 'ಜಾಗತಿಕ ಕಡಲ ತಾಣ'ವನ್ನಾಗಿ ರೂಪಿಸುವ ಗುರಿ ಹೊಂದಿದೆ. ಇದು ಹೊಸ ಬೃಹತ್ -ಬಂದರುಗಳು, ಹಡಗು ನಿರ್ಮಾಣ ವಲಯಗಳು ಮತ್ತು ಹಸಿರು ಬಂದರು ಅಭಿವೃದ್ಧಿಯ (ಹರಿತ್ ಸಾಗರ್) ಮೇಲೆ ಗಮನ ಹರಿಸುತ್ತದೆ.
- **ಮಹಾಸಾಗರ್ (MAHASAGAR - ಪ್ರದೇಶಗಳಾದ್ಯಂತ ಭದ್ರತೆ ಮತ್ತು ಬೆಳವಣಿಗೆಗಾಗಿ ಪರಸ್ಪರ ಮತ್ತು ಸಮಗ್ರ ಪ್ರಗತಿ.):** ಇದು ಹಿಂದೂ ಮಹಾಸಾಗರ ಪ್ರದೇಶದಲ್ಲಿ ಸಮಗ್ರ ಕಡಲ ಭದ್ರತೆ, ಆರ್ಥಿಕ ಬೆಳವಣಿಗೆ ಮತ್ತು ಪರಿಸರ ಸುಸ್ಥಿರತೆಯನ್ನು ಉತ್ತೇಜಿಸುವ ಒಂದು ವಿಶಾಲ ದೃಷ್ಟಿಕೋನ ಮತ್ತು ಸಿದ್ಧಾಂತವಾಗಿದೆ.

## ರೋಹಿಂಗ್ಯಾ ಗಡಿಪಾರು ಪ್ರಕರಣದ ಕುರಿತು ಸರ್ವೋಚ್ಚ ನ್ಯಾಯಾಲಯದ ವಿಚಾರಣೆ

(ಸಾಮಾನ್ಯ ಅಧ್ಯಯನ- 2 / ಆಡಳಿತ / ಅಂತರರಾಷ್ಟ್ರೀಯ ಸಂಬಂಧಗಳು)

**ಇದೀಗ ಸುದ್ದಿಯಲ್ಲಿದೆ :**

- ಕಳೆದ ಮೇ ತಿಂಗಳಿಂದ ದೆಹಲಿ ಪೊಲೀಸರ ವಶದಲ್ಲಿದ್ದ ಹಲವಾರು ರೋಹಿಂಗ್ಯಾ ವ್ಯಕ್ತಿಗಳು ನಾಪತ್ತೆಯಾಗಿದ್ದಾರೆ ಎಂದು ಆರೋಪಿಸಿ, ಸಾಮಾಜಿಕ ಕಾರ್ಯಕರ್ತರು ಸಲ್ಲಿಸಿದ್ದ **'ಹೇಬಿಯಸ್ ಕಾರ್ಪಸ್' (ಬಂದಿ ಪ್ರತ್ಯಕ್ಷೀಕರಣ)** ಅರ್ಜಿಯ ವಿಚಾರಣೆಯನ್ನು ಸರ್ವೋಚ್ಚ ನ್ಯಾಯಾಲಯವು ನಡೆಸಿತು.

**ರೋಹಿಂಗ್ಯಾ ಬಿಕ್ಕಟ್ಟಿನ ಬಗ್ಗೆ**

- **ರೋಹಿಂಗ್ಯಾ:** ಇವರು ಪ್ರಧಾನವಾಗಿ **ಪಶ್ಚಿಮ ಮ್ಯಾನ್ಮಾರ್‌ನ ರಾಖೈನ್ ಪ್ರಾಂತ್ಯ**ದಲ್ಲಿ ನೆಲೆಸಿರುವ, ಬಹುತೇಕ **ಮುಸ್ಲಿಂ ಸಮುದಾಯ**ವನ್ನು ಒಳಗೊಂಡ ಒಂದು **ಜನಾಂಗೀಯ ಗುಂಪಿಗೆ** ಸೇರಿದ್ದಾರೆ.
- ಮ್ಯಾನ್ಮಾರ್ ಸರ್ಕಾರವು ಇವರನ್ನು ದೇಶದ ಪ್ರಜೆಗಳೆಂದು ಪರಿಗಣಿಸದೆ, **'ಅಕ್ರಮ ವಲಸಿಗರು'** ಮತ್ತು **'ವಿದೇಶಿ ನಿವಾಸಿಗಳು'** ಎಂದು ವರ್ಗೀಕರಿಸಿದೆ.

**ನಿರಾಶ್ರಿತರ ಸ್ಥಾನಮಾನಕ್ಕೆ ಸಂಬಂಧಿಸಿದ ಸಮಾವೇಶದ ಬಗ್ಗೆ**

- ಈ ಸಮಾವೇಶವನ್ನು **'1951ರ ನಿರಾಶ್ರಿತರ ಸಮಾವೇಶ'** ಎಂದೂ ಕರೆಯಲಾಗುತ್ತದೆ.
- ಜೀವ ಬೆದರಿಕೆ ಅಥವಾ ಸ್ವಾತಂತ್ರ್ಯ ಹರಣದ ಸಾಧ್ಯತೆಯಿರುವ ದೇಶಗಳಿಗೆ ನಿರಾಶ್ರಿತರನ್ನು ಬಲವಂತವಾಗಿ ಹಿಂದಿರುಗಿಸಬಾರದು ಎಂದು ವಿಶ್ವಸಂಸ್ಥೆಯ ಈ ಒಪ್ಪಂದವು ಬಲವಾಗಿ ಪ್ರತಿಪಾದಿಸುತ್ತದೆ.
- **ಭಾರತದ ಸದಸ್ಯತ್ವ:** ಭಾರತವು ಈ ಸಮಾವೇಶಕ್ಕೆ ಸಹಿದಾರ ರಾಷ್ಟ್ರವಾಗಿಲ್ಲ. .

**ನಾಗರಿಕ ಮತ್ತು ರಾಜಕೀಯ ಹಕ್ಕುಗಳ ಮೇಲಿನ ಅಂತರರಾಷ್ಟ್ರೀಯ ಒಡಂಬಡಿಕೆ (ICCPR)**

- **ಅಂಗೀಕಾರ:** ಇದು 1966ರಲ್ಲಿ ವಿಶ್ವಸಂಸ್ಥೆಯಿಂದ ಅಂಗೀಕರಿಸಲ್ಪಟ್ಟ ಬಹುಪಕ್ಷೀಯ ಒಪ್ಪಂದವಾಗಿದೆ.
- ಈ ಒಡಂಬಡಿಕೆಯು, ಜೀವಿಸುವ ಹಕ್ಕು, ಧಾರ್ಮಿಕ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ, ಸಭೆ ಸೇರುವ ಸ್ವಾತಂತ್ರ್ಯ, ಚುನಾವಣಾ ಹಕ್ಕುಗಳು ಹಾಗೂ ಸೂಕ್ತ ಕಾನೂನು ಪ್ರಕ್ರಿಯೆ ಮತ್ತು ನ್ಯಾಯಯುತ ವಿಚಾರಣೆಯ ಹಕ್ಕುಗಳನ್ನು ಒಳಗೊಂಡಂತೆ, ವ್ಯಕ್ತಿಗಳ ನಾಗರಿಕ ಮತ್ತು ರಾಜಕೀಯ ಹಕ್ಕುಗಳನ್ನು ಗೌರವಿಸಲು ತನ್ನ ಸದಸ್ಯ ರಾಷ್ಟ್ರಗಳಿಗೆ ಬದ್ಧತೆಯನ್ನು ವಿಧಿಸುತ್ತದೆ.

**ರೋಹಿಂಗ್ಯಾಗಳ ಕುರಿತು ಭಾರತದ ನಿಲುವು**

- **ಆಪರೇಷನ್ ಇನ್ಸಾನಿಯತ್ :** ಬಾಂಗ್ಲಾದೇಶದಲ್ಲಿ ಆಶ್ರಯ ಪಡೆದಿರುವ ರೋಹಿಂಗ್ಯಾ ನಿರಾಶ್ರಿತರ ಶಿಬಿರಗಳಿಗೆ ಮಾನವೀಯ ನೆರವು ಒದಗಿಸುವ ಉದ್ದೇಶದಿಂದ ಭಾರತವು 2017ರಲ್ಲಿ "ಆಪರೇಷನ್ ಇನ್ಸಾನಿಯತ್" ಅನ್ನು ಪ್ರಾರಂಭಿಸಿತು.

INSTAKAS

## ಹಣಕಾಸು ನಷ್ಟ ಮತ್ತು ದಿವಾಳಿ ಸಂಹಿತೆ (IBC)

(ಸಾಮಾನ್ಯ ಅಧ್ಯಯನ- 3 / ಆರ್ಥಿಕತೆ)

**ಇದೀಗ ಸುದ್ದಿಯಲ್ಲಿದೆ :**

- ವ್ಯವಸ್ಥಿತ ಅಸಮರ್ಥತೆಗಳು ಮತ್ತು ರಚನಾತ್ಮಕ ವಿಳಂಬಗಳು ಭಾರತದ '**ಹಣಕಾಸು ನಷ್ಟ ಮತ್ತು ದಿವಾಳಿ ಸಂಹಿತೆ** 'ಯ ಪರಿಣಾಮಕಾರಿತ್ವವನ್ನು ಕುಗ್ಗಿಸುತ್ತಿವೆ ಎಂದು ಇತ್ತೀಚೆಗೆ ಹಣಕಾಸಿನ ಮೇಲಿನ ಸಂಸದೀಯ ಸ್ಥಾಯಿ ಸಮಿತಿಯು ಎಚ್ಚರಿಸಿದೆ.

**'ಹಣಕಾಸು ನಷ್ಟ ಮತ್ತು ದಿವಾಳಿ ಸಂಹಿತೆ ' 2016 ರ ಬಗ್ಗೆ**

- ಇದು **ಕಂಪನಿಗಳಲ್ಲಿ ಮತ್ತು ವ್ಯಕ್ತಿಗಳಲ್ಲಿನ ದಿವಾಳಿತನವನ್ನು ಇತ್ಯರ್ಥಪಡಿಸಲು ಕಾಲಮಿತಿಯ ಪ್ರಕ್ರಿಯೆಯನ್ನು ಒದಗಿಸುತ್ತದೆ.**
- **ಹಣಕಾಸು ನಷ್ಟ(Insolvency) ವ್ಯಾಖ್ಯಾನ:** ಇದು ವ್ಯಕ್ತಿಗಳು ಅಥವಾ ಕಂಪನಿಗಳು ತಮ್ಮ ಬಾಕಿ ಸಾಲವನ್ನು ಮರುಪಾವತಿಸಲು ಸಾಧ್ಯವಾಗದ ಒಂದು ಪರಿಸ್ಥಿತಿಯಾಗಿದೆ.
- **ದಿವಾಳಿ (Bankruptcy) ವ್ಯಾಖ್ಯಾನ:** ಇದು ಸಕ್ಷಮ ಅಧಿಕಾರ ವ್ಯಾಪ್ತಿಯ ನ್ಯಾಯಾಲಯವು ವ್ಯಕ್ತಿ ಅಥವಾ ಇತರ ಘಟಕವನ್ನು **'ದಿವಾಳಿ' ಎಂದು ಘೋಷಿಸಿ,** ಅದನ್ನು ಇತ್ಯರ್ಥಪಡಿಸಲು ಮತ್ತು ಸಾಲದಾತರ ಹಕ್ಕುಗಳನ್ನು ರಕ್ಷಿಸಲು ಸೂಕ್ತ ಆದೇಶಗಳನ್ನು ಹೊರಡಿಸುವ ಪರಿಸ್ಥಿತಿಯಾಗಿದೆ. ಇದು ಸಾಲಗಳನ್ನು ತೀರಿಸುವಲ್ಲಿನ ಅಸಮರ್ಥತೆಯ ಕಾನೂನುಬದ್ಧ ಘೋಷಣೆಯಾಗಿದೆ.
- **ಮಹತ್ವ:** ಇದು ಅಡೆತಡೆಗಳನ್ನು ನಿವಾರಿಸುವ, ಕಾರ್ಪೊರೇಟ್ ದಿವಾಳಿ ಪರಿಹಾರ ಪ್ರಕ್ರಿಯೆಯನ್ನು ಸರಳೀಕರಿಸುವ ಮತ್ತು ಆರ್ಥಿಕ ಸಂಕಷ್ಟದಲ್ಲಿರುವ ವಲಯಗಳಲ್ಲಿ ಹೂಡಿಕೆಯನ್ನು ಉತ್ತೇಜಿಸಲು ಅಂತಿಮ ಹಂತದ ಆರ್ಥಿಕ ನೆರವನ್ನು ರಕ್ಷಿಸುವ ಗುರಿಯನ್ನು ಹೊಂದಿದೆ.

**ನ್ಯಾಯ ನಿರ್ಣಯ ಪ್ರಾಧಿಕಾರ**

- ಕಂಪನಿಗಳು ಮತ್ತು ಎಲ್ಎಲ್‌ಪಿ ಗಳಿಗೆ: **ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ (NCLT).**
- ವ್ಯಕ್ತಿಗಳು ಮತ್ತು ಪಾಲುದಾರಿಕೆ ಸಂಸ್ಥೆಗಳಿಗೆ: **ಸಾಲ ವಸೂಲಾತಿ ನ್ಯಾಯಮಂಡಳಿ (DRT).**

**ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ (NCLT) ಯ ಬಗ್ಗೆ**

- **ಸ್ಥಾಪನೆ:** ಇದು **2013ರ ಕಂಪನಿಗಳ ಕಾಯಿದೆ**, ಉಪಬಂಧ 408ರ ಅಡಿಯಲ್ಲಿ **2016ರಲ್ಲಿ** ರಚಿಸಲಾದ ಒಂದು **ಅರೆ-ನ್ಯಾಯಾಂಗ ಸಂಸ್**ಥೆಯಾಗಿದೆ.
- **ಶಿಫಾರಸು:** ದಿವಾಳಿತನ ಮತ್ತು ಕಂಪನಿಗಳ ಮುಚ್ಚುವಿಕೆಗೆ ಸಂಬಂಧಿಸಿದ ಕಾನೂನಿನ ಮೇಲಿನ **ವಿ. ಬಾಲಕೃಷ್ಣ ಎರಾಡಿ ಸಮಿತಿಯ** ಶಿಫಾರಸಿನ ಆಧಾರದ ಮೇಲೆ ಈ ನ್ಯಾಯಮಂಡಳಿಯನ್ನು ಸ್ಥಾಪಿಸಲಾಗಿದೆ.
- **ಉದ್ದೇಶ:** ಈ ನ್ಯಾಯಮಂಡಳಿಯು ಮುಖ್ಯವಾಗಿ ಕಂಪನಿಗಳ ಕಾಯಿದೆ ಮತ್ತು ದಿವಾಳಿ ಕಾನೂನಿಗೆ ಸಂಬಂಧಿಸಿದ ವಿಷಯಗಳನ್ನು ನಿರ್ವಹಿಸುತ್ತದೆ.

## ಇಂಗಾಲದ ಸೆರೆಹಿಡಿಯುವಿಕೆ, ಬಳಕೆ ಮತ್ತು ಸಂಗ್ರಹಣೆ (CCUS)

(ಸಾಮಾನ್ಯ ಅಧ್ಯಯನ-3 / ಪರಿಸರ)

**ಇದೀಗ ಸುದ್ದಿಯಲ್ಲಿದೆ :**

- **ಇಂಗಾಲದ ಸೆರೆಹಿಡಿಯುವಿಕೆ, ಬಳಕೆ ಮತ್ತು ಸಂಗ್ರಹಣೆ (CCUS)** ತಂತ್ರಜ್ಞಾನದ ಮೂಲಕ ಭಾರತದ **'ನಿವ್ವಳ ಶೂನ್ಯ'** ಹೊರಸೂಸುವಿಕೆ ಗುರಿಗಳನ್ನು ತಲುಪಲು ನೆರವಾಗುವ, **ದೇಶದ ಮೊಟ್ಟಮೊದಲ 'ಸಂಶೋಧನೆ ಮತ್ತು ಅಭಿವೃದ್ಧಿ ಮಾರ್ಗಸೂಚಿ**'ಯನ್ನು ಬಿಡುಗಡೆ ಮಾಡಲಾಗಿದೆ.

**ನಿಮಗಿದು ಗೊತ್ತೇ ?**

- **ಚೀನಾ ಮತ್ತು ಅಮೆರಿಕದ ನಂತರ, ಭಾರತವು ವಿಶ್ವದಲ್ಲೇ ಅತಿ ಹೆಚ್ಚು ಇಂಗಾಲದ ಡೈಆಕ್ಸೈಡ್ ($CO_2$) ಹೊರಸೂಸುವ 3ನೇ ರಾಷ್ಟ್ರವಾಗಿದೆ.** ಭಾರತದ ವಾರ್ಷಿಕ ಹೊರಸೂಸುವಿಕೆಯು ಅಂದಾಜು 2.6 ಗಿಗಾಟನ್ (gtpa) ನಷ್ಟಿದೆ.
- ಭಾರತ ಸರ್ಕಾರವು 2050ರ ವೇಳೆಗೆ $CO_2$ ಹೊರಸೂಸುವಿಕೆಯನ್ನು 50% ರಷ್ಟು ತಗ್ಗಿಸಲು ಮತ್ತು **2070ರ**

ವೇಳೆಗೆ 'ನಿವ್ವಳ ಶೂನ್ಯ' ಹಂತವನ್ನು ತಲುಪಲು ಬದ್ಧತೆಯನ್ನು ವ್ಯಕ್ತಪಡಿಸಿದೆ.

**ಇಂಗಾಲದ ಸೆರೆಹಿಡಿಯುವಿಕೆ, ಬಳಕೆ ಮತ್ತು ಸಂಗ್ರಹಣೆ (CCUS) ಯ ಬಗ್ಗೆ**

- ಇದು ಕೈಗಾರಿಕಾ ಸ್ಥಾವರಗಳು, ವಿದ್ಯುತ್ ಉತ್ಪಾದನಾ ಕೇಂದ್ರಗಳು ಅಥವಾ ಇತರೆ ಹೊರಸೂಸುವ ಮೂಲಗಳಿಂದ **ಇಂಗಾಲದ ಡೈಆಕ್ಸೈಡ್ ($CO_2$) ಅನ್ನು ಸೆರೆಹಿಡಿಯುವ ಪ್ರಕ್ರಿಯೆಯಾಗಿದೆ.**
- ಹೀಗೆ ಸೆರೆಹಿಡಿದ ಇಂಗಾಲವನ್ನು **ಮರುಬಳಕೆ ಮಾಡಲಾಗುತ್ತದೆ** ಅಥವಾ ಅದನ್ನು **ಶಾಶ್ವತವಾಗಿ ಸಂಗ್ರಹಿಸಿಡಲಾಗುತ್ತದೆ.** ಉದಾಹರಣೆಗೆ: ಭೂಗರ್ಭದ ಆಳವಾದ ಶಿಲಾಸ್ತರಗಳಲ್ಲಿ ಸಂಗ್ರಹಿಸುವುದು.
- **ಉದ್ದೇಶಿತ ಬಳಕೆಯ ಮಾರ್ಗಗಳು** : ಸೆರೆಹಿಡಿದ $CO_2$ ಅನ್ನು ಮೌಲ್ಯವರ್ಧಿತ ಉತ್ಪನ್ನಗಳನ್ನಾಗಿ ಪರಿವರ್ತಿಸುವುದನ್ನು ಈ ಮಾರ್ಗಸೂಚಿ ಒಳಗೊಂಡಿದೆ.

  **ಉದಾಹರಣೆಗೆ:** ಹಸಿರು ಯೂರಿಯಾ (ರಸಗೊಬ್ಬರ), ಕಟ್ಟಡ ನಿರ್ಮಾಣ ಸಾಮಗ್ರಿಗಳು (ಕಾಂಕ್ರೀಟ್, ಜಲ್ಲಿ/ಅಗ್ರಿಗೇಟ್ಸ್), ರಾಸಾಯನಿಕಗಳು (ಮೆಥನಾಲ್, ಎಥನಾಲ್), ಪಾಲಿಮರ್‌ಗಳು ಮತ್ತು ಜೈವಿಕ ಪ್ಲಾಸ್ಟಿಕ್‌ಗಳು

## ತೂಕ ಇಳಿಕೆಗಾಗಿ GLP-1 ಔಷಧಗಳ ಬಳಕೆಗೆ ವಿಶ್ವ ಆರೋಗ್ಯ ಸಂಸ್ಥೆ ಬೆಂಬಲ

(ಸಾಮಾನ್ಯ ಅಧ್ಯಯನ- 2 / ಆರೋಗ್ಯ)

**ಇದೀಗ ಸುದ್ದಿಯಲ್ಲಿದೆ :**

- ಸ್ಥೂಲಕಾಯ ಅಥವಾ ಬೊಜ್ಜು ನಿರ್ವಹಣೆಗಾಗಿ **'ಗ್ಲುಕಗನ್-ಲೈಕ್ ಪೆಪ್ಟೈಡ್-1' (GLP-1)** ಚಿಕಿತ್ಸೆಗಳನ್ನು ಬಳಸುವ ಕುರಿತು **ವಿಶ್ವ ಆರೋಗ್ಯ ಸಂಸ್ಥೆಯು ಇದೇ ಮೊದಲ ಬಾರಿಗೆ ಅಧಿಕೃತ ಮಾರ್ಗಸೂಚಿಯನ್ನು ಬಿಡುಗಡೆ ಮಾಡಿದೆ.**

**GLP-1 ಚಿಕಿತ್ಸೆಗಳು**

- GLP-1 ಚಿಕಿತ್ಸೆಗಳು (ಗ್ಲುಕಗನ್-ಲೈಕ್ ಪೆಪ್ಟೈಡ್-1 ರಿಸೆಪ್ಟರ್ ಅಗೊನಿಸ್ಟ್‌ಗಳು) ಒಂದು ನಿರ್ದಿಷ್ಟ ವರ್ಗದ ಔಷಧಗಳಾಗಿವೆ.
- ಇವು **ದೇಹದಲ್ಲಿ ನೈಸರ್ಗಿಕವಾಗಿ ಉತ್ಪತ್ತಿಯಾಗುವ GLP-1 ಹಾರ್ಮೋನ್ ಅನ್ನು ಅನುಕರಿಸುತ್ತವೆ.**
- ಈ ಹಾರ್ಮೋನ್ **ರಕ್ತದಲ್ಲಿನ ಸಕ್ಕರೆಯ ಮಟ್ಟವನ್ನು ಮತ್ತು ಹಸಿವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ,** ಈ ಮೂಲಕ ತೂಕ ಇಳಿಕೆಗೆ ಸಹಕಾರಿಯಾಗುತ್ತದೆ.

**ಸ್ಥೂಲಕಾಯ (ಬೊಜ್ಜು) ದ ಬಗ್ಗೆ**

- ಇದು ದೇಹದಲ್ಲಿ ಅತಿಯಾದ ಕೊಬ್ಬಿನ ಶೇಖರಣೆಯಿಂದ ಉಂಟಾಗುವ **ದೀರ್ಘಕಾಲದ ಸಂಕೀರ್ಣ ಕಾಯಿಲೆಯಾಗಿದೆ.**
- **ಆರೋಗ್ಯದ ಮೇಲಿನ ಪರಿಣಾಮಗಳು:** ಇದು 'ಟೈಪ್ 2 ಮಧುಮೇಹ' ಮತ್ತು ಹೃದಯ ಸಂಬಂಧಿ ಕಾಯಿಲೆಗಳ ಅಪಾಯವನ್ನು ಹೆಚ್ಚಿಸುತ್ತದೆ. ಅಲ್ಲದೆ, ಇದು ಮೂಳೆಗಳ ಆರೋಗ್ಯ ಮತ್ತು **ಸಂತಾನೋತ್ಪತ್ತಿ ವ್ಯವಸ್ಥೆಯ ಮೇಲೂ ದುಷ್ಪರಿಣಾಮ** ಬೀರಬಹುದು.
- ಇದು ನಿರ್ದಿಷ್ಟ ಬಗೆಯ **ಕ್ಯಾನ್ಸರ್‌ಗಳ ಅಪಾಯವನ್ನು** ಹೆಚ್ಚಿಸುವುದಲ್ಲದೆ, ನಿದ್ರೆ ಅಥವಾ ದೈಹಿಕ ಚಲನೆಯಂತಹ ಜೀವನದ ಗುಣಮಟ್ಟದ ಮೇಲೂ ಋಣಾತ್ಮಕ ಪ್ರಭಾವ ಬೀರುತ್ತದೆ.
- **ಭಾರತದ ಅಂಕಿ-ಅಂಶ:** ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ-5ರ (NFHS-5) ದತ್ತಾಂಶದ ಪ್ರಕಾರ, ಭಾರತದಲ್ಲಿ ಶೇ. 24ರಷ್ಟು ಮಹಿಳೆಯರು ಮತ್ತು ಶೇ. 23ರಷ್ಟು ಪುರುಷರು ಸ್ಥೂಲಕಾಯ ಸಮಸ್ಯೆಯಿಂದ ಬಳಲುತ್ತಿದ್ದಾರೆ.

## ಸಮಗ್ರ ಶಿಕ್ಷಣ ಯೋಜನೆ

(ಸಾಮಾನ್ಯ ಅಧ್ಯಯನ- 2 / ಕಲ್ಯಾಣ ಯೋಜನೆಗಳು)

**ಇದೀಗ ಸುದ್ದಿಯಲ್ಲಿದೆ :**

- 'ಸಮಗ್ರ ಶಿಕ್ಷಣ ಯೋಜನೆ'ಯ ಅಡಿಯಲ್ಲಿ ಕೇಂದ್ರದ ಅನುದಾನವನ್ನು ಬಿಡುಗಡೆ ಮಾಡಿಸಿಕೊಳ್ಳಲು, **ರಾಜ್ಯಗಳು ಕಡ್ಡಾಯವಾಗಿ ಈ ಯೋಜನೆಯ ಷರತ್ತುಗಳನ್ನು ಪಾಲಿಸಲೇಬೇಕು** ಎಂದು ಕೇಂದ್ರ ಶಿಕ್ಷಣ ಸಚಿವರಾದ ಧರ್ಮೇಂದ್ರ ಪ್ರಧಾನ್ ಅವರು ಮತ್ತೊಮ್ಮೆ ಸ್ಪಷ್ಟಪಡಿಸಿದ್ದಾರೆ.

**ಸಮಗ್ರ ಶಿಕ್ಷಣ ಯೋಜನೆಯ ಬಗ್ಗೆ**

- **ಪ್ರಾರಂಭ:** ಈ ಯೋಜನೆಯನ್ನು **2018-19ನೇ ಸಾಲಿನಲ್ಲಿ** ಜಾರಿಗೆ ತರಲಾಯಿತು.
- **ಹಣಕಾಸು ನೆರವು:** ಇದೊಂದು **ಕೇಂದ್ರ ಪ್ರಾಯೋಜಿತ ಯೋಜನೆಯಾಗಿದೆ**
- **ಉದ್ದೇಶ: ಪೂರ್ವ ಪ್ರಾಥಮಿಕ ಹಂತದಿಂದ ಹಿಡಿದು 12ನೇ ತರಗತಿಯವರೆಗೆ ಎಲ್ಲರಿಗೂ ಸಮಾನ, ಅಂತರ್ಗತ ಮತ್ತು ಗುಣಮಟ್ಟದ ಶಿಕ್ಷಣವನ್ನು ಒದಗಿಸುವುದು** ಇದರ ಮುಖ್ಯ ಉದ್ದೇಶವಾಗಿದೆ.
- **ವೈಶಿಷ್ಟ್ಯಗಳು:** ಈ ಯೋಜನೆಯು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ವಿವಿಧ ಶೈಕ್ಷಣಿಕ ಸುಧಾರಣಾ ಕ್ರಮಗಳ ಮೂಲಕ ಬೆಂಬಲ ನೀಡುತ್ತದೆ. ಇದರಲ್ಲಿ ಸಂಯೋಜಿತ ಶಾಲಾ ಅನುದಾನಗಳು, ಗ್ರಂಥಾಲಯಗಳ ಅಭಿವೃದ್ಧಿ, ಕ್ರೀಡೆ, ಉಚಿತ ಸಮವಸ್ತ್ರ ಮತ್ತು ಪಠ್ಯಪುಸ್ತಕಗಳ ವಿತರಣೆ, **ಐಸಿಟಿ ಉಪಕ್ರಮಗಳು, ಪರಿಹಾರಾತ್ಮಕ ಬೋಧನೆ ಮತ್ತು ನಾಯಕತ್ವದ ಗುಣಮಟ್ಟ ವೃದ್ಧಿಯಂತಹ** ಅಂಶಗಳು ಸೇರಿವೆ.
- **ಮಹತ್ವ:** ಈ ಯೋಜನೆಯು '**ರಾಷ್ಟ್ರೀಯ ಶಿಕ್ಷಣ ನೀತಿ 2020**'ರ ಆಶಯಗಳಿಗೆ ಅನುಗುಣವಾಗಿ ರೂಪಿತವಾಗಿದೆ.

## ಮಲೇರಿಯಾ ಪರಾವಲಂಬಿಗಳು (Malaria Parasites)

(ಸಾಮಾನ್ಯ ಅಧ್ಯಯನ- 2 / ಆರೋಗ್ಯ)

**ಇದೀಗ ಸುದ್ದಿಯಲ್ಲಿದೆ :**

- ಸೊಳ್ಳೆಗಳ ಕಚ್ಚುವಿಕೆಯ ಮೂಲಕ ಮಾನವನ ದೇಹವನ್ನು ಪ್ರವೇಶಿಸುವ ಮಲೇರಿಯಾದ ಸಾಂಕ್ರಾಮಿಕ ರೂಪಗಳಾದ **'ಮಲೇರಿಯಾ ಸ್ಪೋರೋಜೋಯೈಟ್'ಗಳು',** ಚರ್ಮದ **ಅಡಿಯಲ್ಲಿ ಬಲಗೈ ಸುರುಳಿಯಾಕಾರದ ಪಥಗಳಲ್ಲಿ ಚಲಿಸುತ್ತವೆ** ಎಂದು ಇತ್ತೀಚಿನ 'ನೇಚರ್ ಫಿಸಿಕ್ಸ್' ಅಧ್ಯಯನವು **ಬಹಿರಂಗಪಡಿಸಿದೆ.**

**ಮಲೇರಿಯಾ ಬಗ್ಗೆ**

- **ರೋಗಕಾರಕ ಜೀವಿ :** ಮಲೇರಿಯಾವು '**ಪ್ಲಾಸ್ಮೋಡಿಯಂ**' ಎಂಬ ಪರಾವಲಂಬಿ ಜೀವಿಗಳಿಂದ ಉಂಟಾಗುವ ತೀವ್ರ ಸ್ವರೂಪದ ಜ್ವರದ ಕಾಯಿಲೆಯಾಗಿದೆ.
- **ರೋಗವಾಹಕ :** ಇದು ಸೋಂಕಿತ ಹೆಣ್ಣು '**ಅನಾಫಿಲಿಸ್**' ಸೊಳ್ಳೆಗಳ ಕಚ್ಚುವಿಕೆಯಿಂದ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ. ಇದೊಂದು ತಡೆಗಟ್ಟಬಹುದಾದ ಮತ್ತು ಗುಣಪಡಿಸಬಹುದಾದ ರೋಗವಾಗಿದೆ.
- **ಹರಡುವಿಕೆ :** ಮಲೇರಿಯಾವು ನೇರ ಸಂಪರ್ಕದಿಂದ ಹರಡುವ ಸಾಂಕ್ರಾಮಿಕ ರೋಗವಲ್ಲ. ಇದು ಸ್ಪರ್ಶದ ಮೂಲಕ ಒಬ್ಬ ವ್ಯಕ್ತಿಯಿಂದ ಮತ್ತೊಬ್ಬರಿಗೆ ಹರಡುವುದಿಲ್ಲ; ಕೇವಲ ಸೋಂಕಿತ ಹೆಣ್ಣು ಅನಾಫಿಲಿಸ್ ಸೊಳ್ಳೆಯ ಕಚ್ಚುವಿಕೆಯಿಂದ ಮಾತ್ರವೇ ಇದು ಹರಡುತ್ತದೆ.
- **ಪ್ರಭೇದಗಳು:** ಮನುಷ್ಯರಲ್ಲಿ ಮಲೇರಿಯಾವನ್ನು ಉಂಟುಮಾಡುವ 5 ಪರಾವಲಂಬಿ ಪ್ರಭೇದಗಳಿವೆ. ಇವುಗಳಲ್ಲಿ ***ಪ್ಲಾಸ್ಮೋಡಿಯಂ ಫಾಲ್ಸಿಪ್ಯಾರಮ್*** ಮತ್ತು ***ಪ್ಲಾಸ್ಮೋಡಿಯಂ ವೈವಾಕ್ಸ್*** - ಇವೆರಡು ಅತಿ ಹೆಚ್ಚು ಅಪಾಯಕಾರಿಯಾದ ಪ್ರಭೇದಗಳಾಗಿವೆ.

**ರೋಗಲಕ್ಷಣಗಳು**

**ಶಿಶುಗಳು, 5 ವರ್ಷದೊಳಗಿನ ಮಕ್ಕಳು, ಗರ್ಭಿಣಿಯರು, ರೋಗನಿರೋಧಕ ಶಕ್ತಿ ಕಡಿಮೆ ಇರುವವರು (ಎಚ್‌ಐವಿ /ಏಡ್ಸ್ ರೋಗಿಗಳು)** ಮತ್ತು ಪ್ರಯಾಣಿಕರು ಈ ರೋಗಕ್ಕೆ ತುತ್ತಾಗುವ ಹೆಚ್ಚಿನ ಅಪಾಯವನ್ನು ಹೊಂದಿರುತ್ತಾರೆ.

**ತೀವ್ರತರವಾದ ರೋಗಲಕ್ಷಣಗಳು ಈ ಕೆಳಗಿನಂತಿವೆ:**

- ಅತಿಯಾದ ಸುಸ್ತು ಮತ್ತು ಬಳಲಿಕೆ.
- ಪ್ರಜ್ಞಾಹೀನತೆ ಅಥವಾ ಪ್ರಜ್ಞೆ ತಪ್ಪುವುದು.
- ಪದೇ ಪದೇ ಸೆಳೆತಗಳು ಬರುವುದು.
- ಉಸಿರಾಟದ ತೊಂದರೆ.
- ಗಾಢ ಬಣ್ಣದ ಅಥವಾ ರಕ್ತ ಮಿಶ್ರಿತ ಮೂತ್ರ ವಿಸರ್ಜನೆ.
- ಕಾಮಾಲೆ (ಕಣ್ಣುಗಳು ಮತ್ತು ಚರ್ಮ ಹಳದಿ ಬಣ್ಣಕ್ಕೆ ತಿರುಗುವುದು).

- ಅಸಹಜ ರಕ್ತಸ್ರಾವ.

**ವಿಶ್ವ ಆರೋಗ್ಯ ಸಂಸ್ಥೆಯಿಂದ ಮಲೇರಿಯಾ ನಿಯಂತ್ರಣಕ್ಕೆ ಕೈಗೊಂಡ ಉಪಕ್ರಮಗಳು**

- **WHOನ ಮಲೇರಿಯಾ ಜಾಗತಿಕ ತಾಂತ್ರಿಕ ಕಾರ್ಯತಂತ್ರ 2016–2030:** 2015ರ ಅಂಕಿಅಂಶಗಳನ್ನು ಆಧಾರವಾಗಿಟ್ಟುಕೊಂಡು, ಮಲೇರಿಯಾ ಪ್ರಕರಣಗಳು ಮತ್ತು ಮರಣ ಪ್ರಮಾಣವನ್ನು 2020ರ ವೇಳೆಗೆ ಶೇ. 40 ರಷ್ಟು, 2025ರ ವೇಳೆಗೆ ಶೇ. 75 ರಷ್ಟು ಮತ್ತು 2030ರ ವೇಳೆಗೆ ಶೇ. 90 ರಷ್ಟು ತಗ್ಗಿಸುವ ಗುರಿಯನ್ನು ಇದು ಹೊಂದಿದೆ.
- **'ಇ-2025 ಉಪಕ್ರಮ':** 2025ರ ವೇಳೆಗೆ ಮಲೇರಿಯಾವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವ ಸಾಮರ್ಥ್ಯವಿರುವ 25 ದೇಶಗಳನ್ನು ಗುರುತಿಸಿ, ವಿಶ್ವ ಆರೋಗ್ಯ ಸಂಸ್ಥೆಯು ಈ ಉಪಕ್ರಮವನ್ನು ಜಾರಿಗೆ ತಂದಿದೆ.
- **'ಅಧಿಕ ಹೊರೆ - ಅಧಿಕ ಪರಿಣಾಮ' (HBHI) ಉಪಕ್ರಮ:** ಜಾಗತಿಕವಾಗಿ ಅತಿ ಹೆಚ್ಚು ಮಲೇರಿಯಾ ಹೊರೆ ಹೊಂದಿರುವ, ಭಾರತವೂ ಸೇರಿದಂತೆ 11 ದೇಶಗಳಲ್ಲಿ WHO ಈ ವಿಶೇಷ ಉಪಕ್ರಮವನ್ನು ಪ್ರಾರಂಭಿಸಿದೆ.

**ಮಲೇರಿಯಾ ನಿಯಂತ್ರಣಕ್ಕಾಗಿ ಭಾರತ ಸರ್ಕಾರದ ಉಪಕ್ರಮಗಳು**

- **ರಾಷ್ಟ್ರೀಯ ಗುರಿ:** ಭಾರತ ಸರ್ಕಾರವು 2027ರ ವೇಳೆಗೆ ದೇಶದಿಂದ ಮಲೇರಿಯಾವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವ ಮಹತ್ವಾಕಾಂಕ್ಷೆಯ ಗುರಿಯನ್ನು ಹೊಂದಿದೆ.
- **ಮಲೇರಿಯಾ ನಿರ್ಮೂಲನೆಗಾಗಿ ರಾಷ್ಟ್ರೀಯ ಚೌಕಟ್ಟು (NFME):** ಮಲೇರಿಯಾ ನಿರ್ಮೂಲನೆಗಾಗಿ ರೂಪಿಸಲಾದ ಜಾಗತಿಕ ತಾಂತ್ರಿಕ ಕಾರ್ಯತಂತ್ರಕ್ಕೆ (GTS 2016-2030) ಅನುಗುಣವಾಗಿ, ಭಾರತವು 2016ರಲ್ಲಿ ಈ ರಾಷ್ಟ್ರೀಯ ಚೌಕಟ್ಟನ್ನು ಅಭಿವೃದ್ಧಿಪಡಿಸಿ ಜಾರಿಗೆ ತಂದಿದೆ.
- **ಮಲೇರಿಯಾ ನಿರ್ಮೂಲನ ಸಂಶೋಧನಾ ಒಕ್ಕೂಟ - ಭಾರತ (MERA-India):** ಮಲೇರಿಯಾ ನಿಯಂತ್ರಣಕ್ಕಾಗಿ ಶ್ರಮಿಸುತ್ತಿರುವ ಪಾಲುದಾರರ ಒಂದು ಒಕ್ಕೂಟವಾಗಿ, ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯು (ICMR) ಇದನ್ನು ಸ್ಥಾಪಿಸಿದೆ.

## ಪ್ರಧಾನ ಮಂತ್ರಿ ಇಂಟರ್ನ್‌ಶಿಪ್ ಯೋಜನೆ

(ಸಾಮಾನ್ಯ ಅಧ್ಯಯನ : 2 / ಯೋಜನೆಗಳು)

**ಇದೀಗ ಸುದ್ದಿಯಲ್ಲಿದೆ :**

- **ಒಂದು ವರ್ಷದ ಅವಧಿಯಲ್ಲಿ 1.25 ಲಕ್ಷ ಇಂಟರ್ನ್‌ಶಿಪ್ (ವೃತ್ತಿ ತರಬೇತಿ) ಅವಕಾಶಗಳನ್ನು ಸೃಷ್ಟಿಸುವ ಗುರಿಯನ್ನು ಹೊಂದಿದ್ದ 'ಪ್ರಧಾನ ಮಂತ್ರಿ ಇಂಟರ್ನ್‌ಶಿಪ್ ಯೋಜನೆ'**ಯ ಪ್ರಾಯೋಗಿಕ ಯೋಜನೆಯು , ಇದೀಗ ತನ್ನ ನಿಗದಿತ ಗುರಿಯನ್ನು ಮೀರಿ ಮಹತ್ವದ ಸಾಧನೆಯನ್ನು ದಾಖಲಿಸಿದೆ.

**ಪ್ರಧಾನ ಮಂತ್ರಿ ಇಂಟರ್ನ್‌ಶಿಪ್ ಯೋಜನೆಯ ಬಗ್ಗೆ**

- **ಉದ್ದೇಶ:** ದೇಶದ ಮುಂಚೂಣಿ ಕಂಪನಿಗಳಲ್ಲಿ ಯುವಜನತೆಗೆ ಇಂಟರ್ನ್‌ಶಿಪ್ ಅವಕಾಶಗಳನ್ನು ಕಲ್ಪಿಸುವುದು ಮತ್ತು ತನ್ಮೂಲಕ ಶೈಕ್ಷಣಿಕ ಜ್ಞಾನ ಹಾಗೂ ಪ್ರಾಯೋಗಿಕ ಕೌಶಲಗಳ ನಡುವಿನ ಕಂದರವನ್ನು ನಿವಾರಿಸುವುದು ಈ ಯೋಜನೆಯ ಪ್ರಮುಖ ಧ್ಯೇಯವಾಗಿದೆ.
- ಸಚಿವಾಲಯ: **ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ.**
- ಅವಧಿ: ಈ ಇಂಟರ್ನ್‌ಶಿಪ್ **12 ತಿಂಗಳುಗಳ ಕಾಲಾವಧಿಯನ್ನು** ಒಳಗೊಂಡಿರುತ್ತದೆ.
- ಶಿಷ್ಯವೇತನ : ಇಂಟರ್ನ್‌ಗಳು (ತರಬೇತಿ ಪಡೆಯುವವರು) ಪೂರ್ಣ **ಒಂದು ವರ್ಷದ** ಅವಧಿಗೆ **ಮಾಸಿಕ ₹5,000 ರೂಪಾಯಿಗಳ ಶಿಷ್ಯವೇತನವನ್ನು** ಪಡೆಯುತ್ತಾರೆ.
- **ಅರ್ಹತಾ ಮಾನದಂಡಗಳು:**
  - ಅಭ್ಯರ್ಥಿಯು ಕಡ್ಡಾಯವಾಗಿ ಭಾರತೀಯ ಪ್ರಜೆಯಾಗಿರಬೇಕು.
  - ಅಭ್ಯರ್ಥಿಯ **ವಯೋಮಿತಿ 21 ರಿಂದ 24 ವರ್ಷಗಳ ನಡುವಿರಬೇಕು.**
  - ಅಭ್ಯರ್ಥಿಯು **ಪೂರ್ಣಾವಧಿಯ ಉದ್ಯೋಗದಲ್ಲಿರಬಾರದು ಅಥವಾ ಪೂರ್ಣಾವಧಿಯ ಶಿಕ್ಷಣದಲ್ಲಿ ವ್ಯಾಸಂಗ ಮಾಡುತ್ತಿರಬಾರದು.**

INSTA KAS

## ನುಮಾಲಿಗಢ ರಿಫೈನರಿ ಲಿಮಿಟೆಡ್ (NRL) ಗೆ 'ನವರತ್ನ' ಸ್ಥಾನಮಾನ

(ಸಾಮಾನ್ಯ ಅಧ್ಯಯನ-3 / ಆರ್ಥಿಕತೆ)

**ಇದೀಗ ಸುದ್ದಿಯಲ್ಲಿದೆ :**

- ನುಮಾಲಿಗಢ ರಿಫೈನರಿ ಲಿಮಿಟೆಡ್ (NRL) ಗೆ ಪ್ರತಿಷ್ಠಿತ 'ನವರತ್ನ' ಸ್ಥಾನಮಾನವನ್ನು ನೀಡಲಾಗಿದೆ. ಈ ಗೌರವಕ್ಕೆ ಪಾತ್ರವಾದ 27ನೇ ಕೇಂದ್ರ ಸಾರ್ವಜನಿಕ ವಲಯದ ಉದ್ಯಮ (CPSE) ಇದಾಗಿದೆ.

**ನುಮಾಲಿಗಢ ರಿಫೈನರಿ ಲಿಮಿಟೆಡ್ ನ ಬಗ್ಗೆ**

- ಸ್ಥಳ: ಇದು **ಅಸ್ಸಾಂನ ಗೋಲಘಾಟ್ ಜಿಲ್ಲೆಯ ನುಮಾಲಿಗಢದಲ್ಲಿ** ನೆಲೆಗೊಂಡಿರುವ **ಪೆಟ್ರೋಲಿಯಂ ಸಂಸ್ಕರಣಾಗಾರವಾಗಿದೆ.**
- ಭಾರತದ ಕೇಂದ್ರ ಸಾರ್ವಜನಿಕ ವಲಯದ ಉದ್ಯಮಗಳನ್ನು (CPSEs) ಮೂರು ಪ್ರಮುಖ ವರ್ಗಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ - **ಮಿನಿರತ್ನ, ನವರತ್ನ ಮತ್ತು ಮಹಾರತ್ನ**

**ವರ್ಗೀಕರಣ**

- **ಮಿನಿರತ್ನ ಸ್ಥಾನಮಾನ:** ಮಿನಿರತ್ನ ಸ್ಥಾನಮಾನದ ಅಡಿಯಲ್ಲಿ ಸಾರ್ವಜನಿಕ ವಲಯದ ಉದ್ಯಮಗಳನ್ನು**'ಮಿನಿರತ್ನ-I'** ಮತ್ತು **'ಮಿನಿರತ್ನ-II'** ಎಂಬ ಎರಡು ಉಪ-ವರ್ಗಗಳಲ್ಲಿ ವಿಂಗಡಿಸಲಾಗಿದೆ.
- **ನವರತ್ನ ಸ್ಥಾನಮಾನ: ಮಿನಿರತ್ನ-I** ಸ್ಥಾನಮಾನವನ್ನು **ಹೊಂದಿರುವ ಮತ್ತು ಕಳೆದ 5 ವರ್ಷಗಳ ಪೈಕಿ 3 ವರ್ಷಗಳಲ್ಲಿ "ಅತ್ಯುತ್ತಮ" ಅಥವಾ "ಬಹಳ ಉತ್ತಮ"** ಎಂ.ಒ.ಯು ರೇಟಿಂಗ್ ಪಡೆದ ಸಾರ್ವಜನಿಕ ವಲಯದ ಉದ್ದಿಮೆಗಳು ಈ ಸ್ಥಾನಮಾನಕ್ಕೆ ಅರ್ಹವಾಗಿರುತ್ತವೆ.
- **ಮಹಾರತ್ನ ಸ್ಥಾನಮಾನ:** ಸಾರ್ವಜನಿಕ ವಲಯದ ಒಂದು ಉದ್ದಿಮೆಯು ಈ ಕೆಳಗಿನ ಮಾನದಂಡಗಳನ್ನು ಪೂರೈಸಿದಲ್ಲಿ "ಮಹಾರತ್ನ" ಸ್ಥಾನಮಾನವನ್ನು ಪಡೆಯಲು ಅರ್ಹವಾಗಿರುತ್ತದೆ:
  - **"ನವರತ್ನ"** ಸ್ಥಾನಮಾನವನ್ನು ಹೊಂದಿರಬೇಕು.
  - ಭಾರತೀಯ ಷೇರು ಮಾರುಕಟ್ಟೆಗಳಲ್ಲಿ ನೋಂದಾಯಿತವಾಗಿರಬೇಕು.
  - ಕನಿಷ್ಠ ಷೇರು ಪಾಲುದಾರಿಕೆ ನಿಯಮಗಳನ್ನು ಪಾಲಿಸಬೇಕು.
  - **ಕಳೆದ 3 ವರ್ಷಗಳಲ್ಲಿ ಸರಾಸರಿ ವಾರ್ಷಿಕ ವಹಿವಾಟು ₹25,000 ಕೋಟಿಗಿಂತ** ಹೆಚ್ಚಿರಬೇಕು ಮತ್ತು **ಸರಾಸರಿ ವಾರ್ಷಿಕ ನಿವ್ವಳ ಮೌಲ್ಯ ₹15,000 ಕೋಟಿಗಿಂತ** ಹೆಚ್ಚಿರಬೇಕು.
  - **ಕಳೆದ 3 ವರ್ಷಗಳಲ್ಲಿ** ಸರಾಸರಿ ವಾರ್ಷಿಕ **ನಿವ್ವಳ ಲಾಭ ₹5,000 ಕೋಟಿಗಿಂತ** ಹೆಚ್ಚಿರಬೇಕು ಹಾಗೂ ಇದರೊಂದಿಗೆ ಗಮನಾರ್ಹ ಜಾಗತಿಕ ಅಸ್ತಿತ್ವವನ್ನು ಹೊಂದಿರಬೇಕು.
- **ಉದಾಹರಣೆಗಳು:** BHEL, BPCL, ಕೋಲ್ ಇಂಡಿಯಾ, GAIL, HPCL, ಇಂಡಿಯನ್ ಆಯಿಲ್, NTPC ಮತ್ತು ONGC ಇವು ಕೆಲವು ಪ್ರಮುಖ ಮಹಾರತ್ನ ಸಾರ್ವಜನಿಕ ವಲಯದ ಉದ್ಯಮಗಳಾಗಿವೆ.

## ಆಹಾರ ಮತ್ತು ಕೃಷಿಗಾಗಿ ವಿಶ್ವದ ಭೂಮಿ ಮತ್ತು ಜಲ ಸಂಪನ್ಮೂಲಗಳ ಸ್ಥಿತಿಗತಿ (SOLAW 2025)

(ಸಾಮಾನ್ಯ ಅಧ್ಯಯನ- 3 / ಪರಿಸರ)

**ಇದೀಗ ಸುದ್ದಿಯಲ್ಲಿದೆ :**

- ವಿಶ್ವಸಂಸ್ಥೆಯ **'ಆಹಾರ ಮತ್ತು ಕೃಷಿ ಸಂಸ್ಥೆ' (FAO)** ಯು ಇತ್ತೀಚೆಗೆ **'ಆಹಾರ ಮತ್ತು ಕೃಷಿಗಾಗಿ ವಿಶ್ವದ ಭೂಮಿ ಮತ್ತು ಜಲ ಸಂಪನ್ಮೂಲಗಳ ಸ್ಥಿತಿಗತಿ' (SOLAW 2025)** ಎಂಬ ಮಹತ್ವದ ವರದಿಯನ್ನು ಬಿಡುಗಡೆ ಮಾಡಿದೆ.

**SOLAW 2025 ವರದಿಯ ಬಗ್ಗೆ**

- ಪ್ರಕಟಿಸುವ ಸಂಸ್ಥೆ: **ಆಹಾರ ಮತ್ತು ಕೃಷಿ ಸಂಸ್ಥೆ (FAO)**.
- ಭೂಮಿ ಮತ್ತು ಜಲ ಸಂಪನ್ಮೂಲಗಳ ನಿರ್ವಹಣೆಗೆ ಸಂಬಂಧಿಸಿದ ಈ ವರದಿಯು, **ಆಹಾರ ಭದ್ರತೆ ಮತ್ತು ಗ್ರಾಮೀಣಾಭಿವೃದ್ಧಿಯನ್ನು ಖಾತ್ರಿಪಡಿಸಲು** ನೈಸರ್ಗಿಕ **ಸಂಪನ್ಮೂಲಗಳ 'ಸುಸ್ಥಿರ ಬಳಕೆಯನ್ನು'** ಉತ್ತೇಜಿಸುವ ಗುರಿಯನ್ನು ಹೊಂದಿದೆ.

INSTA KAS

**ವರದಿಯ ಇತ್ತೀಚಿನ ಪ್ರಮುಖಾಂಶಗಳು**

- **ಹೆಚ್ಚುತ್ತಿರುವ ಆಹಾರದ ಬೇಡಿಕೆ:** ಜಾಗತಿಕ ಆಹಾರದ ಬೇಡಿಕೆಯನ್ನು ಪೂರೈಸಲು, 2050ರ ವೇಳೆಗೆ ಕೃಷಿ ವಲಯವು ಪ್ರಸ್ತುತ ಉತ್ಪಾದನೆಗಿಂತ ಶೇ. 50 ರಷ್ಟು ಹೆಚ್ಚು ಆಹಾರವನ್ನು ಉತ್ಪಾದಿಸಬೇಕಾದ ಅನಿವಾರ್ಯತೆ ಇದೆ ಎಂದು ವರದಿಯು ಎಚ್ಚರಿಸಿದೆ. ಆದರೆ, ಈ ಪ್ರಕ್ರಿಯೆಯು ಈಗಾಗಲೇ ತೀವ್ರ ಒತ್ತಡದಲ್ಲಿರುವ ಭೂಮಿ, ಮಣ್ಣು ಮತ್ತು ಜಲ ಸಂಪನ್ಮೂಲಗಳ ಮೇಲಿನ ಹೊರೆಯನ್ನು ಮತ್ತಷ್ಟು ಹೆಚ್ಚಿಸಲಿದೆ.
- **ಸಂಪನ್ಮೂಲಗಳ ಮೇಲಿನ ಒತ್ತಡ:** ಪ್ರಸ್ತುತ ಕೃಷಿ ವಲಯವು ಭೂಮಿಯ ಒಟ್ಟು ಭೂಭಾಗದ ಮೂರನೇ ಒಂದರಷ್ಟು ಪ್ರದೇಶವನ್ನು ಆವರಿಸಿಕೊಂಡಿದೆ ಹಾಗೂ ಜಾಗತಿಕ ಸಿಹಿನೀರಿನ ಲಭ್ಯತೆಯಲ್ಲಿ ಶೇ. 72 ರಷ್ಟು ಪಾಲನ್ನು ಬಳಸಿಕೊಳ್ಳುತ್ತಿದೆ.
- **ಭೂಮಿಯ ಅವನತಿ:** ಕೃಷಿಯ ತೀವ್ರತೆಯು ನೀರಿನ ಅಭಾವ, ಅಂತರ್ಜಲದ ಅತಿಯಾದ ಬಳಕೆ ಮತ್ತು 1.6 ಶತಕೋಟಿ ಹೆಕ್ಟೇರ್‌ಗಿಂತಲೂ ಹೆಚ್ಚು ಭೂಮಿಯ (ಇದರಲ್ಲಿ ಬಹುಪಾಲು ಕೃಷಿ ಭೂಮಿಯೇ ಆಗಿದೆ) ಅವನತಿಗೆ ಕಾರಣವಾಗಿದೆ.
- **ವಿಷವರ್ತುಲದ ಪರಿಣಾಮ:** ಮಣ್ಣಿನ ಸಾರಗುಂದುವಿಕೆ, ಕ್ಷೀಣಿಸುತ್ತಿರುವ ಜಲ ಸಂಪನ್ಮೂಲ ಮತ್ತು ಅರಣ್ಯನಾಶದ ಈ 'ವಿಷವರ್ತುಲ'ವು ಕೃಷಿಯ ತಳಹದಿಯನ್ನೇ ದುರ್ಬಲಗೊಳಿಸುತ್ತಿದೆ. ಅಲ್ಲದೆ, ಇದು ಜಾಗತಿಕ ಆಹಾರ ವ್ಯವಸ್ಥೆಯ ಚೇತರಿಸಿಕೊಳ್ಳುವ ಸಾಮರ್ಥ್ಯವನ್ನು ಅಥವಾ ಸ್ಥಿತಿಸ್ಥಾಪಕತ್ವವನ್ನು ಕುಂದಿಸುತ್ತಿದೆ.

## ಡಾ. ರಾಜೇಂದ್ರ ಪ್ರಸಾದ್

(ಸಾಮಾನ್ಯ ಅಧ್ಯಯನ- 1 / ಪ್ರಮುಖ ವ್ಯಕ್ತಿಗಳು)

**ಇದೀಗ ಸುದ್ದಿಯಲ್ಲಿದೆ :**

- **ಭಾರತದ ಪ್ರಥಮ ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದ್** ಅವರ ಜನ್ಮ ಜಯಂತಿಯ ಸ್ಮರಣಾರ್ಥವಾಗಿ, ರಾಷ್ಟ್ರಪತಿಗಳು ಅವರಿಗೆ ಭಾವಪೂರ್ಣ ಗೌರವ ನಮನ ಸಲ್ಲಿಸಿದರು.

**ಆರಂಭಿಕ ಜೀವನ ಮತ್ತು ಶಿಕ್ಷಣ**

- **ಜನನ:** ಇವರು 1884ರಲ್ಲಿ ಬಿಹಾರದ ಸಿವಾನ್ ಜಿಲ್ಲೆಯಲ್ಲಿ ಜನಿಸಿದರು.
- **ಶಿಕ್ಷಣ:** ಕಲ್ಕತ್ತಾದ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ತಮ್ಮ ಪದವಿ ವ್ಯಾಸಂಗವನ್ನು ಪೂರೈಸಿದರು. 1915ರಲ್ಲಿ, ಕಾನೂನು ವಿಷಯದಲ್ಲಿ 'ಸ್ನಾತಕೋತ್ತರ ಪದವಿ'ಯನ್ನು (LLM) 'ಆನರ್ಸ್' ಶ್ರೇಣಿಯೊಂದಿಗೆ ಪೂರ್ಣಗೊಳಿಸಿದರು.

**ಸ್ವಾತಂತ್ರ್ಯ ಹೋರಾಟದಲ್ಲಿ ಡಾ. ರಾಜೇಂದ್ರ ಪ್ರಸಾದ್ ಅವರ ಪಾತ್ರ**

- **ಚಂಪಾರಣ್ ಸತ್ಯಾಗ್ರಹ (1917):** ಮಹಾತ್ಮ ಗಾಂಧೀಜಿಯವರ ಕರೆಯ ಮೇರೆಗೆ ಇವರು ಚಂಪಾರಣ್ ಚಳವಳಿಯಲ್ಲಿ ಭಾಗವಹಿಸಿದರು. ಈ ಘಟನೆಯು ಇವರ ಜೀವನಕ್ಕೆ ಮಹತ್ವದ ತಿರುವನ್ನು ನೀಡಿತು ಮತ್ತು ಇವರನ್ನು ರಾಷ್ಟ್ರ ಸೇವೆಯತ್ತ ಪ್ರೇರೇಪಿಸಿತು.
- **ಅಸಹಕಾರ ಚಳುವಳಿ (1920–22):** ತಮ್ಮ ಯಶಸ್ವಿ ವಕೀಲ ವೃತ್ತಿಯನ್ನು ತ್ಯಜಿಸಿ, **1921ರಲ್ಲಿ ಪಾಟ್ನಾದಲ್ಲಿ 'ನ್ಯಾಷನಲ್ ಕಾಲೇಜ್' ಅನ್ನು ಸ್ಥಾಪಿಸಿದರು.** ಚೌರಿಚೌರಾ ಘಟನೆಯ ನಂತರವೂ ಇವರು ಗಾಂಧೀಜಿಯವರ ನಿರ್ಧಾರಕ್ಕೆ ಬದ್ಧರಾಗಿ ದೃಢವಾಗಿ ನಿಂತರು.
- **ಉಪ್ಪಿನ ಸತ್ಯಾಗ್ರಹ (1930):** ಬಿಹಾರದ ಪಾಟ್ನಾದಲ್ಲಿರುವ **'ನಖಾಸ್ ಹೊಂಡ'ಗಳಲ್ಲಿ ಉಪ್ಪಿನ ಸತ್ಯಾಗ್ರಹದ ನೇತೃತ್ವ ವಹಿಸಿದರು.** ಅಲ್ಲಿ ಸ್ವಯಂಸೇವಕರೊಂದಿಗೆ ಉಪ್ಪನ್ನು ತಯಾರಿಸಿ ಬಂಧನಕ್ಕೊಳಗಾದರು.
- **ಕಾಂಗ್ರೆಸ್ ಅಧ್ಯಕ್ಷತೆ: 1934ರಲ್ಲಿ ನಡೆದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ (INC) ಬಾಂಬೆ ಅಧಿವೇಶನದ ಅಧ್ಯಕ್ಷತೆಯನ್ನು** ಇವರು ವಹಿಸಿದ್ದರು. ತದನಂತರ, **1939ರಲ್ಲಿ** ಸುಭಾಷ್ ಚಂದ್ರ ಬೋಸ್ ಅವರು ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ ಸಂದರ್ಭದಲ್ಲಿ, ಡಾ. ಪ್ರಸಾದ್ ಅವರು ಅಧ್ಯಕ್ಷರಾಗಿ ಆಯ್ಕೆಯಾದರು.
- **ಸಂವಿಧಾನ ರಚನಾ ಸಭೆ: ಜುಲೈ 1946ರಲ್ಲಿ,** ಭಾರತದ ಸಂವಿಧಾನವನ್ನು ರೂಪಿಸಲು ರಚಿಸಲಾದ **'ಸಂವಿಧಾನ ರಚನಾ**

INSTA KAS

**ಸಭೆ'ಯ ಅಧ್ಯಕ್ಷರಾಗಿ ಇವರು ಅವಿರೋಧವಾಗಿ ಆಯ್ಕೆಯಾದರು.**

- **ಭಾರತ ರತ್ನ:** ದೇಶಕ್ಕೆ ಸಲ್ಲಿಸಿದ ಅಪ್ರತಿಮ ಸೇವೆಗಾಗಿ **1962ರಲ್ಲಿ** ಇವರಿಗೆ ಭಾರತದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ಭಾರತ ರತ್ನ'ವನ್ನು ನೀಡಿ ಗೌರವಿಸಲಾಯಿತು.

**ರಾಜೇಂದ್ರ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿದ್ದ ಸಂವಿಧಾನ ರಚನಾ ಸಭೆಯ ಪ್ರಮುಖ ಸಮಿತಿಗಳು**

- **ಕಾರ್ಯವಿಧಾನದ ನಿಯಮಗಳ ಸಮಿತಿ**
- **ಸಂಚಾಲನಾ ಸಮಿತಿ**
- **ಹಣಕಾಸು ಮತ್ತು ಸಿಬ್ಬಂದಿ ಸಮಿತಿ**
- **ರಾಷ್ಟ್ರಧ್ವಜದ ಮೇಲಿನ ತಾತ್ಕಾಲಿಕ ಸಮಿತಿ**

**ಸಾಹಿತ್ಯಿಕ ಕೊಡುಗೆಗಳು**

- ಸತ್ಯಾಗ್ರಹ ಅಟ್ ಚಂಪಾರಣ್ (1922) - (ಚಂಪಾರಣ್ ಸತ್ಯಾಗ್ರಹ)
- ಇಂಡಿಯಾ ಡಿವೈಡೆಡ್ (1946)
- **ಆತ್ಮಕಥಾ (1946) - (ಸ್ವಯಂಚರಿತ್ರೆ)**
- ಮಹಾತ್ಮ ಗಾಂಧಿ ಅಂಡ್ ಬಿಹಾರ್, ಸಮ್ ರೆಮಿನಿಸೆನ್ಸಸ್ (1949)
- ಬಾಪು ಕೆ ಕದಮೋಂ ಮೇ (1954)

INSIGHTSIAS
SIMPLIFYING IAS EXAM PREPARATION
INSTAKAS

# ಸಾರಥಿ

**ಕೆ ಇ ಎ ಗ್ರೂಪ್ ಸಿ & ಡಿ ಹುದ್ದೆಗಳಿಗೆ ಪರೀಕ್ಷಾ ಸರಣಿಗಳು**

**7ನೇ ಡಿಸೆಂಬರ್ 2025 ನಿಂದ ಪ್ರಾರಂಭ**

**10** ಸಾಮಾನ್ಯ ಅಧ್ಯಯನ + **10** ಸಂವಹನ = **20** ಒಟ್ಟು ಪರೀಕ್ಷೆಗಳು

ಕೆಇಎ **708** ಹುದ್ದೆಗಳು

## ವೈಶಿಷ್ಟ್ಯಗಳು

- ಉತ್ತಮ ಗುಣಮಟ್ಟದ ಪ್ರಶ್ನೆಗಳು ಮತ್ತು ಕೆಇಎ ಮಾನದಂಡದ ಪ್ರಕಾರ ವಿವರಣೆಗಳು
- ಸಾಮಾನ್ಯ ಅಧ್ಯಯನ ಮತ್ತು ಸಂವಹನ ಪತ್ರಿಕೆ ಎರಡನ್ನೂ ಪರೀಕ್ಷೆಗಳು ಒಳಗೊಂಡಿರುತ್ತದೆ
- ಪಠ್ಯಕ್ರಮದ ಸಮಗ್ರ ಬೋಧನೆ
- ವಿಶ್ಲೇಷಣೆಯೊಂದಿಗೆ ತ್ವರಿತ ಫಲಿತಾಂಶಗಳು
- ವೈಯಕ್ತೀಕ ಮಾರ್ಗದರ್ಶನ
- ಕೈಗೆಟುಕುವ ಮತ್ತು ಸುಲಭಸಾಧ್ಯೆ ದರಗಳು



**ಶುಲ್ಕಗಳು - ಆಫ್‌ಲೈನ್**

~~₹1500/-~~ **₹1200/-**

**ಶುಲ್ಕಗಳು - ಆನ್‌ಲೈನ್**

~~₹1000/-~~ **₹800/-**

ಆರಂಭಿಕ ರಿಯಾಯಿತಿ ಕೊಡುಗೆ

**20%**

6 ಡಿಸೆಂಬರ್ 2025 ರವರೆಗೆ ಮಾತ್ರ

SUBSCRIBE HERE | TIME TABLE

**ಬೆಂಗಳೂರು ಕಚೇರಿ:**
INSTA KAS , 1134/1, 2 ನೇ ಮಹಡಿ, ಶರಾವತಿ ಆಸ್ಪತ್ರೆಯ ಪಕ್ಕದಲ್ಲಿ, ಸರ್ವಿಸ್ ರಸ್ತೆ, ಅತ್ತಿಗುಪ್ಪೆ ಮೆಟ್ರೋ ನಿಲ್ದಾಣದ ಎದುರು, RPC ಲೇಔಟ್, ವಿಜಯನಗರ, ಬೆಂಗಳೂರು - 560040.

**ಸಂಪರ್ಕ:** 08069405206

**ಮೇಲ್:** support@insightsias.com

www.insightsonindia.com
instacourses.insightsonindia.com

ಶಾಖೆಗಳು: ಬೆಂಗಳೂರು | ದೆಹಲಿ | ಹೈದರಾಬಾದ್ | ಶ್ರೀನಗರ | ಧಾರವಾಡ